
# ನಮ್ಮ ಸಮಾಜ
# ನಮ್ಮ ಜೀವನ



**ಹಮಾರಾದೇಶ ರಾಜ್ಯ ಸಮಿತಿ**

# ಮುನ್ನುಡಿ

ಅಖಿಲ ಭಾರತ ಜನ ವಿಜ್ಞಾನ ಸಂಘಟನೆಗಳ ಜಾಲ ಈ ವರ್ಷ ನಡೆಸುತ್ತಿರುವ "ಹಮಾರಾ ದೇಶ್" ಕಾರ್ಯಕ್ರಮಗಳನ್ನು ಕರ್ನಾಟಕದಲ್ಲಿ ಬಿರುಸಿನಿಂದ ನಡೆಯುತ್ತಿರುವ ಸಾಕ್ಷರೋತ್ತರ. ಸಾಕ್ಷರತಾ ಮತ್ತು ಸಾಕ್ಷರತಾ ಪೂರ್ವ ಸಿದ್ಧತಾ ಕೆಲಸಗಳಿಗೆ ಪೂರಕವಾಗಿ ಮತ್ತು ಬೆಂಬಲವಾಗಿ ಭಾರತ ಜ್ಞಾನ ವಿಜ್ಞಾನ ಸಮಿತಿ ನಡೆಸುತ್ತಿದೆ. ಈ ಕಾರ್ಯಕ್ರಮದ ಅಂಗವಾಗಿ ನಾವು ನಡೆಸಲಿರುವ "ಲೋಕ ಸಂಪರ್ಕ ಆಂದೋಳನ" ಜನ ವಿಜ್ಞಾನ ಚಳುವಳಿಯ ಕಾರ್ಯಕರ್ತರು ಮತ್ತು ಸಾಕ್ಷರತಾ ಕಾರ್ಯಕರ್ತರಲ್ಲಿ ದೇಶದ ಇಂದಿನ ಆಗುಹೋಗುಗಳ ಬಗ್ಗೆ ಜಾಗೃತಿ ಮೂಡಿಸಿ ರಾಷ್ಟ್ರಾಭಿಮಾನ. ರಾಷ್ಟ್ರೀಯ ಭಾವೈಕ್ಯತೆ. ಕೋಮು ಸೌಹಾರ್ದತೆ. ಮತೀಯ ಸಾಮರಸ್ಯ ಮುಂತಾದ ಭಾವನೆಗಳನ್ನು ಬೆಳೆಸಲು ನಮ್ಮ ಸಮಾಜ. ನಮ್ಮ ಬದುಕು. ನಮ್ಮ ಐಕ್ಯತೆ ಮತ್ತು ನಮ್ಮ ಸ್ವಾತಂತ್ರ್ಯ ಎಂಬ ವಿಷಯಗಳನ್ನು ಕುರಿತು ಆಸಕ್ತಿಯಿಂದ ಆಯ್ದ ಕಾರ್ಯಕರ್ತರೊಂದಿಗೆ ಸಂವಾದ ನಡೆಸಲು ರಾಷ್ಟ್ರೀಯ ಸಮಿತಿ ಹೊರತಂದಿರುವ ಸಂವಾದದ ವಿಷಯಗಳ ಕರಡು ಪ್ರತಿಗಳ ಅನುವಾದವನ್ನು ಕನ್ನಡಕ್ಕೆ ಭಾಷಾಂತರಿಸಿ ಕಿರುಹೊತ್ತಿಗೆಯ ರೂಪದಲ್ಲಿ ಕಾರ್ಯಕರ್ತರ ಅನುಕೂಲಕ್ಕಾಗಿ ಹಾಗೂ ಆಸಕ್ತ ಸಾರ್ವಜನಿಕರಿಗಾಗಿ ಪ್ರಕಟಿಸಲಾಗುತ್ತಿದೆ. ಈ ಸಂವಾದದ ವಿಷಯಗಳನ್ನು ಅನುವಾದಿಸಿಕೊಟ್ಟ ಶ್ರೀ ಎಂ.ಎ.ಸೇತುರಾವ್. M.R.ನಾಗರಾಜು. H.S.ನಿರಂಜನಾರಾಧ್ಯ. M.C. ಡೊಂಗ್ರೆ. N. ಇಂದಿರಮ್ಮ. R.ರಾಮಕೃಷ್ಣಪ್ಪ. C.R.ಭಟ್ ಇವರುಗಳಿಗೆ ಹಾಗೂ ಇದರ ವಿನ್ಯಾಸ ಕೆಲಸವನ್ನು ಉತ್ತಮವಾಗಿ ಮಾಡಿಕೊಟ್ಟ M.H.ಶ್ರೀಧರಮೂರ್ತಿಯವರಿಗೆ ಹಾಗೂ ಶೀಘ್ರವಾಗಿ ಮುದ್ರಿಸಿಕೊಟ್ಟ 'ಆನಂದ್ ಪ್ರೋಸೆಸ್' ರವರಿಗೆ ಭಾರತ ಜ್ಞಾನ ವಿಜ್ಞಾನ ಸಮಿತಿ ಆದರ ಪೂರ್ವಕ ವಂದನೆಗಳನ್ನು ಸಲ್ಲಿಸುತ್ತದೆ.

ಸಿ. ಯತಿರಾಜು
ಭಾರತ ಜ್ಞಾನ ವಿಜ್ಞಾನ ಸಮಿತಿ

# ನಮ್ಮ ಸಮಾಜ

ಇಂದು ನಾವಿಲ್ಲಿ ಸೇರಿರುವುದು ನಮ್ಮ ಬಗ್ಗೆ, ನಮ್ಮ ಬದುಕಿನ ಬಗ್ಗೆ, ನಮ್ಮ ಆಸೆ-ಆಕಾಂಕ್ಷೆಗಳ ಬಗ್ಗೆ ಹರಟೆ ಹೊಡೆಯಲು, ದೇಶದಾದ್ಯಂತ ಸಾವಿರಾರು ಸ್ಥಳಗಳಲ್ಲಿ ಇಂತಹ ಹರಟೆಗಳು ನಡೆಯುತ್ತಿವೆ. ಇದು "ಹಮಾರಾ ದೇಶ್" ನಮ್ಮ ನಾಡು ಎಂಬ ಕಾರ್ಯಕ್ರಮದ ಒಂದು ಭಾಗ. ನಮ್ಮ ದೇಶವಿಂದು ಗಂಡಾತರದಲ್ಲಿದೆ, ಭಾರಿ ಗಂಡಾಂತರದಲ್ಲಿದೆ. ಮತ್ತೆ ನಾವು ಸ್ವಾತಂತ್ರ್ಯವನ್ನು ಕಳೆದುಕೊಳ್ಳಬಹುದು, ಮತ್ತೆ ವಿಚ್ಛಿದ್ರಗೊಳ್ಳಬಹುದು. ನಮ್ಮ ದೇಶವನ್ನು ರಕ್ಷಿಸಬೇಕಾಗಿದೆ. "ಹಮಾರಾ ದೇಶ್" ಎಂಬ ಈ ಆಂದೋಲನ ಜನರನ್ನು ಎಚ್ಚರಗೊಳಿಸುವ ಕಾರ್ಯಕ್ರಮವಾಗಿದೆ. ಈದಿನ ಅದನ್ನೆಲ್ಲಾ ಚರ್ಚಿಸದೆ ನಮ್ಮ ಬಗ್ಗೆ ಮತ್ತು ನಮ್ಮ ಬದುಕಿನ ಬಗ್ಗೆ ಮಾತ್ರ ಚರ್ಚೆಯನ್ನು ಸೀಮಿತಗೊಳಿಸೋಣ.

ಕೊರೆಯುವ ಚಳಿಯಲ್ಲಿ ಹೊದಿಯಲು ನಮಗೇನಾದರೂ ಇದೆಯೇ ?ನಾವು ಹರಿದ ಚಿಂದಿ ಬಟ್ಟೆಯನ್ನು ಸುತ್ತಿಕೊಂಡಿದ್ದೇವೆ. ಚಳಿಯಲ್ಲಿಗಡಗಡನೆ ನಡುಗುತ್ತಿದ್ದೇವೆ. ಇದೇ ರೀತಿ ದೇಶದಾದ್ಯಂತ ನಮ್ಮ ಸೋದರ-ಸೋದರಿಯರು ನಡುಗುತ್ತಿದ್ದಾರೆ.

ನಾವೆಲ್ಲಿ ವಾಸಿಸುತ್ತಿದ್ದೇವೆ ? ನಮಗೆಂತಹ ನಿವಾಸಗಳಿವೆ ? ಹಂದಿಗೂಡಿನಂತಹವು. ಅವು ಮನುಷ್ಯರು ವಾಸಿಸಲು ಯೋಗ್ಯವಾಗಿದೆಯೇ ? ನಮ್ಮ ಸುತ್ತಮುತ್ತ ಇರುವ ಬಹುತೇಕ ಮನೆಗಳು ಇದೇ ರೀತಿ ಇವೆ. ದೂರದ ಪಟ್ಟಣಗಳಲ್ಲಿ ಮತ್ತು ಊರಿನ ಆಚೆ ಬದಿಯಲ್ಲಿ ವಿಶಾಲ ಅಂಗಳದ ಸೌಧಗಳನ್ನು ಕಾಣುತ್ತೇವೆ. ನಾವು ಅರಮನೆಗಳನ್ನು ಕೇಳುತ್ತಿಲ್ಲ. ಅವು ನಮಗೆ ದೊರೆಯಲಾರವು. ಆದರೆ, ದೀರ್ಘಕಾಲ ಬಾಳುವ, ನಾವು ಪ್ರೀತಿಸಬಹುದಾದ ಸುತ್ತಲೂ ಅಚ್ಚುಕಟ್ಟಾಗಿರುವ ಚಿಕ್ಕ-ಚೊಕ್ಕ ಮನೆ ನಮಗೆ ಬೇಕು. ನಾವು ಸಹ ನಮ್ಮ ಮಕ್ಕಳನ್ನು ಆರೋಗ್ಯವಾಗಿಡಬೇಕಾಗಿದೆ. ಹೌದು, ಹೆಚ್ಚಿನದೇನನ್ನು ನಾವು ಬೇಡುತ್ತಿಲ್ಲ. ಏನೆಲ್ಲಾ ನಾವು ಕೇಳುತ್ತಿರುವುದು ಅನ್ನ, ಬಟ್ಟೆ ಮತ್ತು ಮನೆ (ರೋಟಿ, ಕಪಡಾ ಔರ್ ಮಕಾನ್) ಸದ್ಯದಲ್ಲಿ ಅವು ನಮಗಿಲ್ಲ. ಮುಂದೇನಾದರೂ ದೊರೆಯಬಹುದೆಂಬ ಭರವಸೆಯಿದೆಯೇ ? ನಾವಿಂದು ಬದುಕುತ್ತಿದ್ದೇವೆ. ನಿನ್ನೆ ಮುಗಿಯಿತೆಂಬ ಸಮಾಧಾನ ಆದರೆ ನಾಳಿನ ಬಗ್ಗೆ ಭಯ ನಮಗೆ.

ನಮ್ಮ ಮಕ್ಕಳು, ಅವರನ್ನು ನಾವು ಪ್ರೀತಿಸುತ್ತೇವೆ. ಆದರೆ ಪ್ರೀತಿಯ ವಿನಃ ಅವರಿಗೆ ನಾವೇನನ್ನು ಕೊಟ್ಟಿದ್ದೇವೆ ? ಅವರು ಹಸಿದಿದ್ದಾರೆ. ಅರೆಹೊಟ್ಟೆ ಚಿಂದಿ ಬಟ್ಟೆ ಅವರಿಗೆ. ಅವರು ಶಾಲೆಗಳಿಗೆ ಹೋಗುತ್ತಿಲ್ಲ. ಅವರ ಶಾಲಾ ಖರ್ಚನ್ನು ನಾವು ಭರಿಸಲು ಸಾಧ್ಯವಿಲ್ಲ. ಹತ್ತಿರದಲ್ಲೆಲ್ಲೂ ಒಳ್ಳೆಯ ಶಾಲೆಗಳಿಲ್ಲ. ಎಲ್ಲಿ ಅದೃಷ್ಟವಂತ ಮಕ್ಕಳು ಓದುತ್ತಿದ್ದಾರೋ ಎಲ್ಲವನ್ನು ಪಡೆದಿರುವ ನಮ್ಮ ಮಕ್ಕಳಿಗಿಂತ ಭಿನ್ನವಾಗಿರುವ ಅದೃಷ್ಟವಂತ ಮಕ್ಕಳು, ಯಾವ ಶಾಲೆಗಳಲ್ಲಿ ಓದುತ್ತಿದ್ದಾರೋ ಅಂತಹ ಶಾಲೆಗಳಿಗೆ ನಮ್ಮ ಮಕ್ಕಳನ್ನು ಕಳುಹಿಸಲು ನಾವು ಶಕ್ತರಾಗಿಲ್ಲ. ಉಚಿತ ಬೋಧನೆಯಿರುವ ಕೆಲವು "ಸರ್ಕಾರಿ ಶಾಲೆಗಳಿಗೆ" ನಾವು ಕಳುಹಿಸಲು ಸಾಧ್ಯವಾದರೂ ಅಲ್ಲಿನ ಶಿಕ್ಷಕರು, ಪೋಷಕರು ಮತ್ತು ಅದೃಷ್ಟವಂತ ಮಕ್ಕಳು, ನಮ್ಮ ಮಕ್ಕಳನ್ನು ಅಲ್ಲಿಂದ ಹೊರದೂಡಿಬಿಡುತ್ತಾರೆ. ನಮ್ಮ ಮಕ್ಕಳು ಅವರ ಮಕ್ಕಳ ಸಹವರ್ತಿಗಳಾಗಿರಲು ಯೋಗ್ಯರೆ ಅಲ್ಲ ! ಅದೂ ಅಲ್ಲದೆ, ಪಠ್ಯಪುಸ್ತಕಗಳು, ಸಮವಸ್ತ್ರ, ವಿಶೇಷ ಶುಲ್ಕ ಇತ್ಯಾದಿಗಳನ್ನು ನಾವು ಭರಿಸಲಾಗುವುದಿಲ್ಲವಲ್ಲ. ಮಿಗಿಲಾಗಿ ಆದಾಯ ತರುವ ಸಣ್ಣಪುಟ್ಟ ಕೆಲಸಗಳಿಗೆ ನೆರವಾಗಲೆಂದೋ, ಕೊನೆಪಕ್ಷ ಚಿಕ್ಕಮಕ್ಕಳನ್ನು ನೋಡಿಕೊಂಡು ತಾಯಿಗೆ ಕೆಲಸ ಮಾಡಲು ಬಿಡುವು ಕೊಡುವರೆಂದೋ, ದೊಡ್ಡಮಕ್ಕಳನ್ನು ಜೊತೆಯಲ್ಲೇ ಇಟ್ಟುಕೊಳ್ಳುತ್ತೇವೆ.

ಆ ಪುಟ್ಟ ದೇವತೆಗಳು, ಮುದ್ದು ಮಕ್ಕಳು, ಅಂದವಾದ ಉಡುಪು ತೊಟ್ಟು ಪುಸ್ತಕದ ಚೀಲದೊಂದಿಗೆ, ನಗುನಗುತ್ತಾ ಶಾಲೆಯ ಕಡೆಗೆ ಓಡುತ್ತಿರುವುದನ್ನು ನಾವು ನೋಡಿಲ್ಲವೇ ? ಆಗ ನಮ್ಮ ಹೃದಯ ಮಿಡಿದಿಲ್ಲವೇ ?ಅದೇ ರೀತಿ ಅಂದವಾದ ಬಟ್ಟೆ ತೊಟ್ಟು, ತಿಂದುಂಡು ಆರೋಗ್ಯಕರವಾಗಿದ್ದು, ನಮ್ಮ ಮಕ್ಕಳು ಶಾಲೆಗಳಿಗೆ ಹೋಗಬೇಕೆಂದು ಆಸೆಪಟ್ಟಿಲ್ಲವೇ ? ಆದರೆ ಆಸೆಪಡುವಷ್ಟು ಧೈರ್ಯವೂ ನಮಗಿಲ್ಲ. ಇದು ಅಸಾಧ್ಯವೇನಲ್ಲ ಎಂಬುದೇ ಇಂದಿನ ವೈರುಧ್ಯ. (ವ್ಯಂಗ್ಯ)

ಸೋವಿಯತ್ ರಷ್ಯಾ ಎಂಬ ದೇಶವೊಂದಿತ್ತು. ದುರಾದೃಷ್ಟವಶಾತ್ ಅದು ಇಂದು ಅಸ್ತಿತ್ವದಲ್ಲಿಲ್ಲ. ಅದು ವಿಚ್ಛಿದ್ರಗೊಂಡು ಬಡವಾಗಿದೆ. ಆ ದೇಶದಲ್ಲಿ ದಾರಿದ್ರ್ಯ (ಬಡತನ) ಇಲ್ಲೇವೇ ಇಲ್ಲ ಎಂಬ ಕಾಲವೊಂದಿತ್ತು. ಪ್ರತಿಯೊಬ್ಬರಿಗೂ ಗೌರವಾನ್ವಿತ ಹುದ್ದೆ ವಾಸಿಸಲು ಅರಮನೆಯಿಲ್ಲದಿದ್ದರೂ ಅಂದವಾದ ಮನೆ, ಇಂದು ನಾಳೆಗಾಗುವಷ್ಟು ಅನ್ನ, ಭವಿಷ್ಯದ ಭದ್ರತೆ, ಮಕ್ಕಳಿಗೆ ಆರೋಗ್ಯ ಎನೆಲ್ಲವೂ ತ್ತು. ಇದೇ ಪರಿಸ್ಥಿತಿ ಇತರ ಸಮಾಜವಾದಿ ದೇಶಗಳಲ್ಲಿತ್ತು. ದುರಾದೃಷ್ಟವಶಾತ್ ಆ ದೇಶಗಳಲ್ಲೂ ಸನ್ನಿವೇಶ ಬದಲಾಗಿದೆ. ನಿರುದ್ಯೋಗ ಮತ್ತೆ ತಲೆ ಎತ್ತಿದೆ. ಕೊರತೆ (ಹಾಹಾಕಾರ) ಮರುಕಳಿಸಿದೆ. ಆದರೆ ಆ ದೇಶಗಳಲ್ಲಿ ಒಂದು ಕಾಲದಲ್ಲಿ ಇತರ ನೋವುಗಳಲ್ಲಿ ನಲಿವನ್ನು ಕಾಣುವ ಪೆಡಂಭೂತಗಳನ್ನು ಮಣಿಸಲು,

ಸಾಧ್ಯವಾಗಿದ್ದು, ನಿರುದ್ಯೋಗ ಮತ್ತು ಬಡತನವನ್ನು ನಿವಾರಿಸಲು ಯಶಸ್ವಿಯಾಗಿದ್ದು, ನಮಗೆ ಭರವಸೆ ಮೂಡಿಸಿದೆ. ನಾವು ಸಹ ಮನಸ್ಸು ಮಾಡಿ ಪ್ರಯತ್ನಿಸಿದರೆ ಒಂದಲ್ಲ ಒಂದು ದಿನ ನಮ್ಮನ್ನು ಬಡತನದಲ್ಲಿಟ್ಟವುಗಳನ್ನು ಮಣಿಸಬಹುದು.

ಆದರೆ ಇಂದಿನದು ನಿರಾಶಾದಾಯಕ ಸ್ಥಿತಿ. ಏನೂ ಇಲ್ಲ, ನಮಗೆ, ಎಲ್ಲವೂ ಇದೆ ಅವರಿಗೆ. ಯಾವ ಸ್ವಾತಂತ್ರ್ಯಕ್ಕೋಸ್ಕರ ನಮ್ಮ ಹಿರಿಯರು ಹೋರಾಡಿದ್ದರೋ, ಆ ಸ್ವಾತಂತ್ರ್ಯವನ್ನು ಅವರು (ಅವರ ಹಿರಿಯರು ದ್ರೋಹವೆಸಗಿದ್ದರೂ) ಸ್ವಹಿತಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ನಾವು ಹೊಲವನ್ನು ಉಳುಮೆ ಮಾಡಿ ಬೆಳೆ ಬೆಳೆದು ಒಕ್ಕಣೆ ಮಾಡುತ್ತೇವೆ. ಅವರು ಉಗ್ರಾಣಗಳಲ್ಲಿ ತುಂಬಿಕೊಂಡು ತಿಂದು, ಮಿಗಿಲಾದುದನ್ನು ನಾವು ಹಸಿದಿರುವಾಗ ನಮಗೇ ಮಾರುತ್ತಾರೆ. ನಾವು ಗೊಣಗುಟ್ಟಿದರೆ, ಅವರು ಹೊಡೆಯುತ್ತಾರೆ. ನಮಗೆಲ್ಲಾ ಭರವಸೆ ಮೂಡಿಸಿದ್ದ "ಭೂಸುಧಾರಣಾ ಕಾಯ್ದೆ" ಜಾರಿಗೆ ಬರಲೇ ಇಲ್ಲ. ಬಡವರ ಉದ್ಧಾರಕ್ಕೆಂದು ಸರ್ಕಾರ ಅನೇಕ ತೋರಿಕೆಯ ಕಾರ್ಯಕ್ರಮಗಳನ್ನು ಆರಂಭಿಸುತ್ತದೆ. ಅವರು ನಿರರ್ಥಕಗೊಳಿಸುತ್ತಾರೆ. ಇದು ಸರ್ಕಾರಕ್ಕೆ ತಿಳಿದಿದೆ. ಪ್ರತಿಯೊಬ್ಬರಿಗೂ ತಿಳಿದಿದೆ. ಆದರೇನು ಪ್ರಯೋಜನ ? ಸರ್ಕಾರ ಕನಿಷ್ಠ ವೇತನ ಕಾಯಿದೆಯನ್ನು ಜಾರಿಗೆ ತಂದು ಅಸಂಬದ್ಧವಾದ "ಕನಿಷ್ಠ ಕೂಲಿ"ಯನ್ನು ನಿಗದಿಗೊಳಿಸಿತ್ತು. ಆದರೆ ಅದು ಕಾರ್ಯಗತವಾಗಲಿಲ್ಲ. ಈ ಬಗ್ಗೆ ನಾವು ಪ್ರಶ್ನಿಸಿದರೆ, ನಮ್ಮನ್ನು ಕೆಲಸದಿಂದ ವಜಾ ಮಾಡುತ್ತಾರೆ. ಇಲ್ಲವೇ ಥಳಿಸುತ್ತಾರೆ. ಒಂದು ಪಕ್ಷ ನಾವು ಸಂಘಟನೆಯಾಗಿ ಒಗ್ಗೂಡಿದರೆ ಅವರ ಗೂಂಡಾಗಳು ನಮ್ಮನ್ನು ಹಣ್ಣಾಗುವಂತೆ ಬಡಿಯುತ್ತಾರೆ ಇಲ್ಲವೇ ಜೀವಂತ ಸುಡುತ್ತಾರೆ.

ನೀವು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದ್ದೀರಾ ? ಹಾಗಾದರೆ ನಿಮ್ಮ ಹೆಸರಿನಲ್ಲಿ ಹಲವಾರು ಯೋಜನೆಗಳಿವೆ. ಅವುಗಳ ಲಾಭವನ್ನು ಬೇರೆಯವರು ಕಬಳಿಸುತ್ತಾರೆ. ಅವರು "ಬಡತನವನ್ನು ನಿವಾರಿಸುವ ಬದಲು ಬಡವರನ್ನೇ ನಿರ್ಮೂಲನ ಮಾಡುತ್ತಿದ್ದಾರೆ." ನೀವು ಪ್ರತಿಭಟಿಸಿ, ಒಟ್ಟಾಗಿ ಪ್ರತಿಭಟಿಸಿ ಅವರು ಸೇಡುತೀರಿಸಿಕೊಳ್ಳುತ್ತಾರೆ. ನಿಮ್ಮ ಮನಸ್ಸಿನಲ್ಲಿ ವಿಷಬೀಜ ಬಿತ್ತಿ ಕಥೆಕಟ್ಟಿ ನಿಮಗೆ ಹೇಳುತ್ತಾರೆ. ನಿಮ್ಮ ಸೋದರರೊಂದಿಗೆ ಹೊಡೆದಾಡುವಂತೆ ಮಾಡುತ್ತಾರೆ. ಜಾತಿ ಧರ್ಮದ ಹೆಸರಿನಲ್ಲಿ, ಮಂದಿರ ಮಸೀದಿ ಹೆಸರಿನಲ್ಲಿ ಭಾಷೆಸಂಸ್ಕೃತಿ ಹೆಸರಿನಲ್ಲಿ, ಚರ್ಚು ಗುರುದ್ವಾರಗಳ ಹೆಸರಿನಲ್ಲಿ ನಿಮ್ಮನ್ನು ಹೊಡೆದಾಡುವಂತೆ ಮಾಡುತ್ತಾರೆ. ಪರದೇಶಿ ಮಕ್ಕಳು (Sons of Other soils) ಎಂದು ಹೇಳಿ ಹೊಡೆದಾಡುವಂತೆ ಮಾಡುತ್ತಾರೆ. ಮತ್ತೆ ಕೆಲವೊಮ್ಮೆ ಕೆಲವನ್ನರಸುತ್ತಾ ಬೇರೆಡೆಗೆ ಹೋಗಲು ನಿಮಗೆ ಸಾಧ್ಯವಿಲ್ಲದಂತಾಗಿದೆ.

ಅವರು ನಮ್ಮನ್ನು ಅನಕ್ಷರತೆ ಯಲ್ಲಿಟ್ಟಿದ್ದಾರೆ. 14 ರ ವಯೋಮಿತಿಯವರೆಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡಬೇಕೆಂಬುದು ಸಂವಿಧಾನಾತ್ಮಕ ಭರವಸೆ. ಎಲ್ಲಾ ಭರವಸೆಗಳಂತೆ ಇದನ್ನೂ ಕೂಡ ಪಾಲಿಸಲಿಲ್ಲ. ನಮಗಾಗಿ ಶಾಲೆಗಳಾಗಲೀ, ಆಸ್ಪತ್ರೆಗಳಾಗಲೀ, ರಸ್ತೆಗಳಾಗಲೀ, ಮತ್ತೇನೂ ಇಲ್ಲ. ಆದರೆ, ಅವರಿಗೆ ಎಲ್ಲವೂ ಸಕಲವೂ ಇದೆ.

ಮತ್ತೆ ನಾವು ಯಾರಿಗೆ ದೂರುಕೊಡಬೇಕು ? ಸರ್ಕಾರಕ್ಕೆ ? ಅದನ್ನು ನಾವೇ ಚುನಾಯಿಸಿದ್ದೇವೆ. ಆದರೆ ಸರ್ಕಾರ ನಮ್ಮ ಪಾಲಿಗಿದೆಯೇ ? ಮತಪೆಟ್ಟಿಗೆಗಳನ್ನು ಗೂಂಡಾಗಳು ವಶಪಡಿಸಿಕೊಂಡಿರಲಿಲ್ಲವೇ ? ಚುನಾವಣಾಧಿಕಾರಿ ನಮ್ಮ ಮತ ಚಲಾಯಿಸಲ್ಪಟ್ಟಿದೆ ಎಂದು ಹೇಳಿರಲಿಲ್ಲವೆ ? ನಾವು ಪೋಲಿಸರಿಗೆ ದೂರು ಕೊಟ್ಟಿರಲಿಲ್ಲವೇ ? ಬಹುಶಃ ಇಲ್ಲ, ಏಕೆ ಎಂದು ನೀವು ಕೇಳಬಹುದು. ನಮಗೆ ಗೊತ್ತಿದೆ ಅವರು ಗೂಂಡಾಗಳು ಮತ್ತು ಅವರ ಯಾಜಮಾನರೊಂದಿಗೆ ಕೈಗೂಡಿಸಿದ್ದಾರೆ. ಇಲ್ಲ ಕಾನೂನನ್ನು ಗೌರವಿಸುವ ಪೌರರಿಗೆ ರಕ್ಷಕರೇ ಇಲ್ಲ . ಅವರು ನಮ್ಮನ್ನು ಹೆದರಿಸುತ್ತಾರೆ. ಬ್ಲಾಕ್ ಮೇಲ್ ಮಾಡುತ್ತಾರೆ. ಬಲಾತ್ಕರಿಸಿ ನಮ್ಮಿಂದ ಕಿತ್ತುಕೊಳ್ಳುತ್ತಾರೆ. ನಮಗೆ ಎಂತಹ ಸರ್ಕಾರವಿದೆ. ಅದು ದಬ್ಬಾಳಿಕೆಯನ್ನು ನಡೆಸುವವರ ಪರವಾಗಿದೆ. ಅದರಿಂದ ನಾವು ನ್ಯಾಯವನ್ನು ನಿರೀಕ್ಷಿಸುವಂತಿಲ್ಲ. ನಮಗಿದು ತಿಳಿದಿದೆ. ಒಂದೆರಡು ಬಾರಿಯಲ್ಲ ಹಲವಾರು ಬಾರಿ ಇದನ್ನ ಕಂಡಿದ್ದೇವೆ. ಸರ್ಕಾರದಲ್ಲಿರುವ ಹಲವರು ನಮ್ಮಿಂದ ಚುನಾಯಿತರಾದವರೇ ಅಲ್ಲ ! ಗೂಂಡಾತನದಲ್ಲಿ ಎಲ್ಲವನ್ನು ಮಾಡಿ ಮುಗಿಸಿದ್ದಾರೆ. ಪ್ರತಿಯಾಗಿ ಅವರು ಗೂಂಡಾಗಳನ್ನು ರಕ್ಷಿಸುತ್ತಾರೆ. ಹೀಗೆ ಸರ್ಕಾರ ವ್ಯವಸ್ಥಿತವಾಗಿ ಮಾಫಿಯಾಗಳನ್ನು, ಕಳ್ಳಸಾಗಾಣಿಕೆದಾರರನ್ನು, ದರೋಡೆಕೋರರನ್ನು, ದೇಶದ್ರೋಹಿಗಳನ್ನು ರಕ್ಷಿಸುತ್ತಿದೆ. ಚುನಾವಣೆಗೆ ಮುನ್ನ ಆಶ್ವಾಸನೆಗಳನ್ನು ನೀಡುವ ರಾಜಕೀಯ ನಾಯಕರು ನಂತರ ಅವುಗಳನ್ನು ಗಾಳಿಗೆ ತೂರುವುದನ್ನೇ ಮಾಡುತ್ತಾರೆ. ನಮ್ಮಿಂದ ಚುನಾಯಿತರಾದ ಅವರು ನಮ್ಮನ್ನು ಆಳುತ್ತೇವೆಂದು ಹೇಳುತ್ತಲೇ ಹಾಳುಮಾಡುತ್ತಿದ್ದಾರೆ.

ಸರ್ಕಾರಕ್ಕೆ ಪರಮಧಿಕಾರವಿದೆ. ಇಡೀ ಪೋಲೀಸ್ ಪಡೆ, ಮಿಲಿಟರಿ, ಮತ್ತು ನ್ಯಾಯಾಂಗ ಅದರ ಜೊತೆಗಿದೆ. ದೇಶದ ಸಂಪತ್ತೆಲ್ಲಾ ಸರ್ಕಾರದ ಅಧೀನದಲ್ಲಿದೆ. ಅದು ಮನಸಾ ಇಚ್ಛೆ ಅಧಿಕಾರಗಳ ದುಂದು ವೆಚ್ಚಕ್ಕೆ ವ್ಯಯಿಸುತ್ತಾ ನಿರ್ಭಯವಾಗಿ ಖಜಾನೆಗೆ ಕನ್ನಹಾಕಲಾಗುತ್ತಿದೆ. ಪ್ರತಿವರ್ಷವೂ ಬೋಫೋರ್ಸ್, ಷೇರು ಹಗರಣದಂತಹ ಭಾರಿ ಪ್ರಮಾಣದ ಭ್ರಷ್ಟಾಚಾರ ನಡೆದು ಇಡೀ ದೇಶ ತತ್ತರಿಸುತ್ತಿದೆ. ಅಪರಾಧಿಗಳಿಗೆ ಯಾವತ್ತು ಶಿಕ್ಷೆಯಾಗಿಲ್ಲ. ಅವರೆಲ್ಲಾ ಪ್ರಭಾವಿ ವ್ಯಕ್ತಿಗಳು (higher up people) ಇಡೀ ಸಮಾಜ

ಕಲುಷಿತವಾಗಿದೆ. ಯಾವ ಮೌಲ್ಯಗಳೂ ಉಳಿದಿಲ್ಲ. ಭ್ರಷ್ಟಾಚಾರ ಎಲ್ಲಾ ಹಂತಗಳಿಗೂ ವ್ಯಾಪಿಸಿ, ಪ್ರಾಮಾಣಿಕತೆ ಪರಿಹಾಸ್ಯಕ್ಕೀಡಾಗಿದೆ.

ಇದನ್ನೆಲ್ಲಾ ಸಹಿಸಲಾಗದೆ ಕೆಲವರು ಭಯೋತ್ಪಾದನೆಯ ರೂಪದಲ್ಲಿ ಸೇಡುತೀರಿಸಿಕೊಳ್ಳುತ್ತಿದ್ದಾರೆ. ಯಾರಿಗೆ ದೀನದಲಿತರ ಮತ್ತು ಶೋಷಣೆಗೆ ಒಳಗಾದವರ ಬಗ್ಗೆ ನಿಜವಾದ ಅನುಕಂಪವಿದೆಯೋ ಯಾರು ಪ್ರಾಮಾಣಿಕರು ಮತ್ತು ಸಜ್ಜನರಾಗಿದ್ದಾರೋ, ಯಾರು ತಮ್ಮ ಬಲಿದಾನಕ್ಕೆ ಸಿದ್ಧರಾಗಿದ್ದಾರೋ, ಅವರಿಂದ ಭಯೋತ್ಪಾದನೆ ಆರಂಭವಾಗುತ್ತದೆ. ಕತ್ತಲೆಯ ಮುಸುಕಿನಲ್ಲಿ ಮಾಡುವ ಯಾವುದೇ ಕೆಲಸ ಹೀನಾಯವಾದದ್ದು. ಸ್ವಾರ್ಥಿಗಳು, ಗೂಂಡಾಗಳು ಮತ್ತು ಅಪರಾಧಿಗಳು ನುಸುಳಿ ಅವರ ಸ್ಥಾನಗಳನ್ನು ಕ್ರಮಿಸಿಕೊಂಡು ಅಲ್ಪಸಂಖ್ಯಾತರನ್ನಾಗಿ ಮಾಡಿ ಅವರ ಉದ್ದೇಶವನ್ನೇ ವಿಫಲಗೊಳಿಸುತ್ತಾರೆ.

ತೀರಾ ಹತಾಶೆಯ ಪರಿಸ್ಥಿತಿ, ದುಷ್ಟರನ್ನು ಶಿಕ್ಷಿಸಲು ಶಿಷ್ಟರನ್ನು ರಕ್ಷಿಸಲು ಯಾವ ದೇವರು ಅವತಾರವೆತ್ತಿ ಬರುವುದಿಲ್ಲ. ನಾವು ಅವನಿಗಾಗಿ ಕಾಯುವುದು ನಿಷ್ಪ್ರಯೋಜನ. ನಮ್ಮನ್ನು ನಾವೇ ರಕ್ಷಿಸಿಕೊಳ್ಳಬೇಕು. ಅದೂ ನಮಗೆ ಅಂತಹ ಅಭಿಲಾಷೆ ಇದ್ದರೆ, ಕೇವಲ ಹಿಂದೆ ನಿಂತು ಪ್ರತಿಕ್ರಿಯೆ ತೋರಿಸುವುದು ತೀರಾ ಕೆಟ್ಟದ್ದು. ಸಮಾಜದಲ್ಲಿ ಏನೇನು ನಡೆಯುತ್ತಿದೆ ಎಂದು ಸುಮ್ಮನೆ ಯೋಚಿಸು. ನೀವು ಹೊಲ ಉಳುತ್ತೀರಿ, ಬೀಜ ಬಿತ್ತುತ್ತೀರಿ ಹೊಲಕ್ಕೆ ನೀರುಣಿಸಿ ಬೆಳೆ ಬೆಳೆಯುತ್ತಿದ್ದೀರಿ, ಮಾರುಕಟ್ಟೆಗೆ ಒಯ್ಯುತ್ತೀರಿ, ಕಲ್ಲುಬಂಡೆಗಳನ್ನು ಒಡೆಯುತ್ತೀರಿ, ಗಾರೆ ಸಿಮೆಂಟ್ ತರುತ್ತೀರಿ ಮತ್ತು ಮನೆಗಳನ್ನು ಕಟ್ಟುತ್ತೀರಿ, ರಸ್ತೆಗಳನ್ನು ಅಗೆಯುತ್ತೀರಿ. ನಾಲೆಗಳನ್ನು ತೋಡುತ್ತೀರಿ, ಚಿನಿವಾರಿಕೆ, ಬಡಗಿತನ, ಕೊಯ್ಲು ಕೆಲಸವನ್ನು ಮಾಡುತ್ತೀರಿ, ಮರಕಡಿದು ಸೌದೆ ಮಾಡುತ್ತೀರಿ, ಅವರ ಮಹಲು ಮತ್ತು ಲಾಯಗಳನ್ನು ಚೊಕ್ಕಟ ಮಾಡುತ್ತೀರಿ, ನೀವು ಎಲ್ಲವು ಎಲ್ಲವನ್ನು ಮಾಡುತ್ತೀರಿ.

ಒಂದು ದಿನ ಪವಾಡ ನಡೆದು ತಾತ್ಕಾಲಿಕವಾಗಿ ನೀವೇನಾದರೂ ಇದ್ದಲ್ಲಿಯೇ ಕಲ್ಲಿನಂತೆಮೂರ್ತೀಭವಿಸಿದರೆ, ಹೊಲ ಉಳುವವರಿಲ್ಲದೆ, ಸೌದೆ ಒಡೆಯುವವರಿಲ್ಲದೆ, ಮನೆಗಳನ್ನು ಚೊಕ್ಕಟ ಮಾಡುವವರಿಲ್ಲದೆ ಆ ಶ್ರೀಮಂತ ಕುಳಗಳು ಏನು ಮಾಡಬಲ್ಲರು ! ಯಾವಾಗಲಾದರೂ ಹೀಗೆ ಯೋಚಿಸಿದ್ದೀರಾ ? ಅವರು ನಿಮ್ಮ ಮೇಲೆ ಎಷ್ಟೊಂದು ಅವಲಂಬಿಸಿದ್ದಾರೆ. ಹೌದು, ಅವರ ಬದುಕು, ನೀವಿಲ್ಲದಿದ್ದರೆ ಸಾವಿನಷ್ಟೇ ಕೆಟ್ಟದ್ದಾಗಿರುತ್ತದೆ. ಇನ್ನೊಂದು ರೀತಿ ನಡೆದರೆ ಅವರೆಲ್ಲಾ ಕಲ್ಲಿನಂತೆ ಮೂರ್ತೀಭವಿಸಿದರೆ (ನೀವೆಷ್ಟು

ಅಪೇಕ್ಷಿಸಿದರೂ ಹೀಗಾಗುವುದಿಲ್ಲ) ನಿಮಗೇನು ಆಗುವುದಿಲ್ಲ, ನೀವು ಇನ್ನು ಚೆನ್ನಾಗಿ ಬದುಕುವುದನ್ನು ಮುಂದುವರಿಸುತ್ತೀರಿ, ಇದೆಲ್ಲವೂ ನಿಮಗೆ ತಿಳಿದಿದೆ. ನಿಜ ನಿಮಗೆ ಓದುಬರಹ ತಿಳಿದಿಲ್ಲ, ವಿಜ್ಞಾನ-ತಂತ್ರಜ್ಞಾನ ತಿಳಿದಿಲ್ಲ, ಸಂಸ್ಕೃತಿ-ಇಂಗ್ಲೀಷ್ ತಿಳಿದಿಲ್ಲ. ಆದರೆ ಸ್ವಲ್ಪಸ್ವಲ್ಪವಾಗಿ ಹಂತಹಂತವಾಗಿ ಅವುಗಳನ್ನು ಕಲಿಯಬೇಕು. ಒಂದು ವೇಳೆ ಭೂಮಾಲೀಕರು ತೊಲಗಿ, ಭೂಮಿ ನಿಮಗೆ ಸಿಕ್ಕರೆ ಉತ್ತಮವಾದೀತು. ಆಗ ನೀವು ನಿಮ್ಮ ಆಹಾರವನ್ನು ನೀವೇ ಬೆಳೆಯಬಹುದು. ನಿಮ್ಮ ಬಟ್ಟೆಯನ್ನು ನೀವೇ ನೇಯಬಹುದು. ನಿಮ್ಮ ಮನೆಯನ್ನು ನೀವೆ ಕಟ್ಟಿಕೊಳ್ಳಬಹುದು. ನೀವು ಹೀಗಿರುವುದನ್ನು ಅವರು ಇದೆಲ್ಲಾ ನಮಗೆ ಸೇರಿದ್ದೆಂದು ಹೇಳುತ್ತಲೇ ತಡೆಯುತ್ತಿದ್ದಾರೆ. ಅದು ಶುದ್ಧ ಸುಳ್ಳು. ಈ ಮಣ್ಣು ಯಾರಿಗೂ ಸೇರಿದ್ದಲ್ಲ. ಹುಟ್ಟುವಾಗ ಯಾರು ಹೊತ್ತು ತಂದಿಲ್ಲ. ಸತ್ತಾಗ ಯಾರೂ ಹೊತ್ತೊಯ್ಯುವುದಿಲ್ಲ. ಹೀಗೆಯೇ ಆಕಾಶ, ಗಾಳಿ, ನೀರು, ಭೂಮಿಯೊಳಗಿನ ಸಂಪತ್ತು, ಭೂಮಿಯ ಮೇಲಿನ ಸಸ್ಯರಾಶಿ ..... ಎಲ್ಲವುದರ ಮೇಲೆ ಇಲ್ಲಿ ಹುಟ್ಟಿದ ಪ್ರತಿಯೊಬ್ಬರಿಗೂ ಹಕ್ಕಿದೆ. ನಾವು ಈ ಹಕ್ಕಿಗಾಗಿ ಹೋರಾಟವನ್ನು ಮುಂದುವರೆಸಬೇಕಾಗಿದೆ.

ನೀವು ಹೇಳುವುದೆಲ್ಲಾ ತುಂಬಾ ಚೆನ್ನಾಗಿದೆ. ಆದರೆ ನಾವಿದನ್ನು ಸಾಧಿಸುವುದು ಹೇಗೆ ? ಎಂದು ನೀವು ಕೇಳಬಹುದು. ನೀವು ಈ ಹಿಂದೆ ಹತೋಟಿ ತೆಗೆದುಕೊಳ್ಳಲುಹೋಗಿದ್ದು, ಹೊಡೆದದ್ದು, ಹೊಡೆತತಿಂದು ಮೂಳೆ ಮುರಿಸಿಕೊಂಡಿದ್ದು, ಭರವಸೆಯನ್ನೇ ಕಳೆದುಕೊಂಡದ್ದು ಹೀಗೆ ಸಾವಿರದೊಂದು ಪ್ರಕರಣಗಳನ್ನು ನೆನಪಿಸಿಕೊಳ್ಳಬಹುದು. ನಿಜ, ನಾವು ಯತ್ನಿಸಬೇಕು, ಪ್ರಯತ್ನಿಸಬೇಕು, ಮರಳಿ ಯತ್ನಿಸುತ್ತಲೇ ಇರಬೇಕು. ಈ ನಿರಂತರ ಹೋರಾಟದಲ್ಲಿ ನಮ್ಮ ಆಯುಧಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಲೇ ಶತ್ರು ಪಾಳೆಯ ದುರ್ಬಲ ಭಾಗಗಳತ್ತ ಗಮನ ಹರಿಸಬೇಕು.

ನಾವು - ನೀವೆಲ್ಲಾ ಇಂದು ಓದು - ಬರಹ ಕಲಿಯುತ್ತಿದ್ದೇವೆ. ಇದು ಸಣ್ಣ ಕೆಲಸವೇನಲ್ಲ, ಇದರಿಂದ ಹಿಂದೆ ಇಲ್ಲದಿದ್ದ ಆತ್ಮವಿಶ್ವಾಸ ನಮಗೆ ಬಂದಿದೆ. ನಾವಿದನ್ನು ತುಂಬಾ ಚೆನ್ನಾಗಿ ಅಂದರೆ ಉಳುವುದು, ನೇಯುವುದು, ಕೊಯ್ಯುವುದು, ಓಡುವುದು ಈಜುವುದನ್ನೂ ತಿಳಿದಿರುವಷ್ಟು ಚೆನ್ನಾಗಿ ತಿಳಿಯಬೇಕಾಗಿದೆ. ಕೇವಲ ಹೆಸರು ಬರೆಯುವುದನ್ನು, ಕಲಿತರಷ್ಟೇ ಸಾಲದು. ನಾವು ಇನ್ನೂ ಹೆಚ್ಚು ಕಲಿಯಬೇಕಾಗಿದೆ. "ಪದವನ್ನು ತಿಳಿಯುವುದು ಪ್ರಪಂಚವನ್ನು ತಿಳಿದಂತೆ" ಉಳ್ಳವರು ನಮ್ಮನ್ನಾಳುತ್ತಿದ್ದಾರೆ. ಏಕೆಂದರೆ ಅವರಲ್ಲಿ ಜ್ಞಾನದ ಶಕ್ತಿಯಿದೆ. ಹೌದು ಜ್ಞಾನವೇ ಶಕ್ತಿ. ಅದನ್ನು ನಾವು ಪಡೆಯಬೇಕು. ಅಕ್ಷರಗಳನ್ನೂ, ಪದಗಳನ್ನೂ ಕಲಿಯುವುದು ಈ ದಿಶೆಯಲ್ಲಿ ಮೊದಲ ಹೆಜ್ಜೆ ಮಾತ್ರ. ನಾವು ಹೆಜ್ಜೆಗಳನ್ನಿಡುತ್ತಾ ದೂರು ಬಹುದೂರ ಸಾಗಬೇಕಾಗಿದೆ. ಸಾಕ್ಷರತಾ

ತರಗತಿಗಳಲ್ಲಿ ನಾವು ಸ್ವಲ್ಪವಾದರೂ ತಿಳಿದಿದ್ದೇವೆ. ಅವರೆಲ್ಲಾ ಹೇಗೆ ಬಿಡುಗಡೆ ಪಡೆದರೆಂಬುದನ್ನು ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ನಮ್ಮ ಸೋದರಿಯರ ಕಥೆ ಕೇಳಿದ್ದೇವಲ್ಲಾ. ಅವರೆಲ್ಲಾ ಒಟ್ಟಾಗಿ ತಮ್ಮ ಗಂಡಸರು ಭಟ್ಟಿಸಾರಾಯಿಗೆ ಬಲಿಯಾಗುವುದನ್ನು ಹೇಗೆ ನಿಲ್ಲಿಸಿದರೆಂದು, ಹೇಗೆ ಸರ್ಕಾರವನ್ನು ಮಣಿಸಿ, ಸಾರಾಯಿ ಅಂಗಡಿಗಳನ್ನೂ ಮುಚ್ಚಿಸಿ ಪಾನನಿಷೇಧವನ್ನು ಜಾರಿಗೆ ತರಲು ಸರ್ಕಾರದ ಮೇಲೆ ಹೇಗೆ ಒತ್ತಡ ತಂದರೆಂದು ತಿಳಿದಿದೆ. ತಮಿಳುನಾಡಿನ ಪುದುಕೋಟೆ ಜಿಲ್ಲೆಯ ನಮ್ಮ ಸೋದರಿಯರು ಗ್ರಾನೈಟ್ ಗಣಿಗಳ ಮಾಲೀಕರಾದ ಹಿರಿಮೆ, ಅಲ್ಲದೆ ಬ್ಯಾಂಕಿಂಗ್ ವ್ಯವಹಾರ ಮತ್ತು ವ್ಯಾಪಾರಗಳಲ್ಲಿ ಅವರನ್ನೂ ತೊಡಗಿಸಿಕೊಂಡಿದ್ದಾರೆ. ಆ ಮಹಿಳೆಯರು ಸಹ ಒಂದೆರಡು ವರ್ಷಗಳ ಹಿಂದೆ ನಮ್ಮಂತೆಯೇ ಅನಕ್ಷರಸ್ಥರು. ಅಂಜುಬುರುಕರು ಮತ್ತು ಸಂದೇಹ ಉಳ್ಳವರಾಗಿದ್ದರು ಇಂತಹ ಅನೇಕ ಉದಾಹರಣೆಗಳಿವೆ.

ಇಲ್ಲಿ ಯಾವುದೇ ''ಸಂದೇಹವಾದಕ್ಕೆ'' ಅವಕಾಶವಿಲ್ಲ. ನಮಗೆ ಸಾಧಿಸಲಾಗದ್ದು ಏನೂ ಇಲ್ಲ. ನಾವು ತೀವ್ರವಾಗಿ ಹಂತಹಂತವಾಗಿ ಪ್ರಯತ್ನಿಸಬೇಕಷ್ಟೆ ಒಂಟಿಯಾಗಿ, ಅಥವಾ ಸಣ್ಣಗುಂಪುಗಳಲ್ಲಿ ಪ್ರಯತ್ನಿಸಿದರೆ ವಿಫಲರಾಗುತ್ತೇವೆ ಮತ್ತೆ ಹೊಡೆತ ತಿನ್ನುತ್ತೇವೆ, ಯಾವುದೇ ಜಾತಿ ಮತಕ್ಕೆ ಸೇರಿರಲಿ ನಾವೆಲ್ಲಾ ಒಂದೇ ಹೊಟ್ಟೆ ಎರಡು ಕೈಗಳಿರುವ ಮನುಷ್ಯರೆಂಬುದನ್ನು ಮರೆಯಬಾರದು. ನಾವೆಲ್ಲಾ ಒಂದೇ ರೀತಿಯ ಹಸಿವು, ಒಂದೇ ರೀತಿಯ ದಾರಿದ್ರ್ಯದಲ್ಲಿ ನರಳುತ್ತಿದ್ದೇವೆ. ಒಂದೇ ರೀತಿಯ ಕೊಳಕು ನೀರನ್ನೂ, ಒಂದೇ ರೀತಿಯ ಕೆಟ್ಟವಾಸನೆಯ ಗಾಳಿಯನ್ನು ಸೇವಿಸುತ್ತಿದ್ದೇವೆ. ಅವರು ನಮ್ಮ ಒಗ್ಗಟ್ಟನ್ನು ಒಡೆಯುತ್ತಿದ್ದಾರೆ. ಮತ್ತೆ ತಮ್ಮ ಮೇಲೆ ಬೀಳುವುದನ್ನು ತಪ್ಪಿಸಿಕೊಳ್ಳಲು ನಮ್ಮನ್ನು ಪರಸ್ಪರಕಿತ್ತಾಡಲು ಹಚ್ಚುತ್ತಾರೆ. ಅದೇ ಜನ, ಮೇಲ್ಜಾತಿ-ಕೆಳಜಾತಿ, ಮಂದಿರ-ಮಸೀದಿ ಎಂದು ಹೇಳುತ್ತಾ ಪಾಪ ಪ್ರಜ್ಞೆಯ ವಿಷಬೀಜವನ್ನು ಬಿತ್ತುತ್ತಿದ್ದಾರೆ. ಆದರೆ ನಾವೆಲ್ಲಾ ಒಂದೇ ತಲೆ ಮತ್ತು ಎರಡು ಕಣ್ಣುಗಳಿರುವ ಮನುಷ್ಯರು ಅವುಗಳನ್ನು ಬಳಸಿ ಸತ್ಯತೆಯನ್ನು ಕಂಡುಕೊಳ್ಳೋಣ. ನಮಗೆ ದೊರೆಯಲಿರುವ ಪ್ರತಿಯೊಂದು ಅವಕಾಶವನ್ನು ಬುದ್ಧಿವಂತಿಕೆಯಿಂದ ಬಳಸಿಕೊಳ್ಳೋಣ ನಮಗೊಂದು ಸುವರ್ಣಾವಕಾಶವಿದೆ.

ಇಷ್ಟರಲ್ಲೇ ಗ್ರಾಮ ಪಂಚಾಯಿತಿ ಚುನಾವಣೆಗಳು ಬರಲಿವೆ .ನೀವು ಸದಸ್ಯರು ಮತ್ತು ಅಧ್ಯಕ್ಷರನ್ನು ಆರಿಸಬೇಕಾಗಿದೆ. ಈ ಹಿಂದೆಯೂ ಪಂಚಾಯಿತಿಗಳಿದ್ದವು ಆದರೆ ಈ ಬಾರಿ ಭಿನ್ನವಾದ ಪಂಚಾಯಿತಿಗಳು ಬರಲಿವೆ.

ಅಪೇಕ್ಷಿಸಿದರೂ ಹೀಗಾಗುವುದಿಲ್ಲ) ನಿಮಗೇನು ಆಗುವುದಿಲ್ಲ, ನೀವು ಇನ್ನು ಚೆನ್ನಾಗಿ ಬದುಕುವುದನ್ನು ಮುಂದುವರಿಸುತ್ತೀರಿ, ಇದೆಲ್ಲವೂ ನಿಮಗೆ ತಿಳಿದಿದೆ. ನಿಜ ನಿಮಗೆ ಓದುಬರಹ ತಿಳಿದಿಲ್ಲ, ವಿಜ್ಞಾನ-ತಂತ್ರಜ್ಞಾನ ತಿಳಿದಿಲ್ಲ, ಸಂಸ್ಕೃತಿ-ಇಂಗ್ಲೀಷ್ ತಿಳಿದಿಲ್ಲ. ಆದರೆ ಸ್ವಲ್ಪಸ್ವಲ್ಪವಾಗಿ ಹಂತಹಂತವಾಗಿ ಅವುಗಳನ್ನು ಕಲಿಯಬೇಕು. ಒಂದು ವೇಳೆ ಭೂಮಾಲೀಕರು ತೊಲಗಿ, ಭೂಮಿ ನಿಮಗೆ ಸಿಕ್ಕರೆ ಉತ್ತಮವಾದೀತು. ಆಗ ನೀವು ನಿಮ್ಮ ಆಹಾರವನ್ನು ನೀವೇ ಬೆಳೆಯಬಹುದು. ನಿಮ್ಮ ಬಟ್ಟೆಯನ್ನು ನೀವೇ ನೇಯಬಹುದು. ನಿಮ್ಮ ಮನೆಯನ್ನು ನೀವೆ ಕಟ್ಟಿಕೊಳ್ಳಬಹುದು. ನೀವು ಹೀಗಿರುವುದನ್ನು ಅವರು ಇದೆಲ್ಲಾ ನಮಗೆ ಸೇರಿದ್ದೆಂದು ಹೇಳುತ್ತಲೇ ತಡೆಯುತ್ತಿದ್ದಾರೆ. ಅದು ಶುದ್ಧ ಸುಳ್ಳು, ಈ ಮಣ್ಣು ಯಾರಿಗೂ ಸೇರಿದ್ದಲ್ಲ. ಹುಟ್ಟುವಾಗ ಯಾರು ಹೊತ್ತು ತಂದಿಲ್ಲ. ಸತ್ತಾಗ ಯಾರೂ ಹೊತ್ತೊಯ್ಯುವುದಿಲ್ಲ. ಹೀಗೆಯೇ ಆಕಾಶ, ಗಾಳಿ, ನೀರು, ಭೂಮಿಯೊಳಗಿನ ಸಂಪತ್ತು, ಭೂಮಿಯ ಮೇಲಿನ ಸಸ್ಯರಾಶಿ ..... ಎಲ್ಲವುದರ ಮೇಲೆ ಇಲ್ಲಿ ಹುಟ್ಟಿದ ಪ್ರತಿಯೊಬ್ಬರಿಗೂ ಹಕ್ಕಿದೆ. ನಾವು ಈ ಹಕ್ಕಿಗಾಗಿ ಹೋರಾಟವನ್ನು ಮುಂದುವರೆಸಬೇಕಾಗಿದೆ.

ನೀವು ಹೇಳುವುದೆಲ್ಲಾ ತುಂಬಾ ಚೆನ್ನಾಗಿದೆ. ಆದರೆ ನಾವಿದನ್ನು ಸಾಧಿಸುವುದು ಹೇಗೆ ? ಎಂದು ನೀವು ಕೇಳಬಹುದು. ನೀವು ಈ ಹಿಂದೆ ಹತೋಟಿ ತೆಗೆದುಕೊಳ್ಳಲುಹೋಗಿದ್ದು, ಹೊಡೆದದ್ದು, ಹೊಡೆತತಿಂದು ಮೂಳೆ ಮುರಿಸಿಕೊಂಡಿದ್ದು, ಭರವಸೆಯನ್ನೇ ಕಳೆದುಕೊಂಡದ್ದು ಹೀಗೆ ಸಾವಿರದೊಂದು ಪ್ರಕರಣಗಳನ್ನು ನೆನಪಿಸಿಕೊಳ್ಳಬಹುದು. ನಿಜ, ನಾವು ಯತ್ನಿಸಬೇಕು, ಪ್ರಯತ್ನಿಸಬೇಕು, ಮರಳಿ ಯತ್ನಿಸುತ್ತಲೇ ಇರಬೇಕು. ಈ ನಿರಂತರ ಹೋರಾಟದಲ್ಲಿ ನಮ್ಮ ಆಯುಧಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಲೇ ಶತೃ ಪಾಳೆಯ ದುರ್ಬಲ ಭಾಗಗಳತ್ತ ಗಮನ ಹರಿಸಬೇಕು.

ನಾವು - ನೀವೆಲ್ಲಾ ಇಂದು ಓದು - ಬರಹ ಕಲಿಯುತ್ತಿದ್ದೇವೆ. ಇದು ಸಣ್ಣ ಕೆಲಸವೇನಲ್ಲ, ಇದರಿಂದ ಹಿಂದೆ ಇಲ್ಲದಿದ್ದ ಆತ್ಮವಿಶ್ವಾಸ ನಮಗೆ ಬಂದಿದೆ. ನಾವಿದನ್ನು ತುಂಬಾ ಚೆನ್ನಾಗಿ ಅಂದರೆ ಉಳುವುದು, ನೇಯುವುದು, ಕೊಯ್ಯುವುದು, ಓಡುವುದು ಈಜುವುದನ್ನೂ ತಿಳಿದಿರುವಷ್ಟು ಚೆನ್ನಾಗಿ ತಿಳಿಯಬೇಕಾಗಿದೆ. ಕೇವಲ ಹೆಸರು ಬರೆಯುವುದನ್ನು, ಕಲಿತರಷ್ಟೇ ಸಾಲದು. ನಾವು ಇನ್ನೂ ಹೆಚ್ಚು ಕಲಿಯಬೇಕಾಗಿದೆ. "ಪದವನ್ನು ತಿಳಿಯುವುದು ಪ್ರಪಂಚವನ್ನು ತಿಳಿದಂತೆ" ಉಳ್ಳವರು ನಮ್ಮನ್ನಾಳುತ್ತಿದ್ದಾರೆ. ಏಕೆಂದರೆ ಅವರಲ್ಲಿ ಜ್ಞಾನದ ಶಕ್ತಿಯಿದೆ. ಹೌದು ಜ್ಞಾನವೇ ಶಕ್ತಿ. ಅದನ್ನು ನಾವು ಪಡೆಯಬೇಕು. ಅಕ್ಷರಗಳನ್ನೂ, ಪದಗಳನ್ನೂ ಕಲಿಯುವುದು ಈ ದಿಶೆಯಲ್ಲಿ ಮೊದಲ ಹೆಜ್ಜೆ ಮಾತ್ರ. ನಾವು ಹೆಜ್ಜೆಗಳನ್ನಿಡುತ್ತಾ ದೂರು ಬಹುದೂರ ಸಾಗಬೇಕಾಗಿದೆ. ಸಾಕ್ಷರತಾ

ತರಗತಿಗಳಲ್ಲಿ ನಾವು ಸ್ವಲ್ಪವಾದರೂ ತಿಳಿದಿದ್ದೇವೆ. ಅವರೆಲ್ಲಾ ಹೇಗೆ ಬಿಡುಗಡೆ ಪಡೆದರೆಂಬುದನ್ನು ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ನಮ್ಮ ಸೋದರಿಯರ ಕಥೆ ಕೇಳಿದ್ದೇವಲ್ಲಾ. ಅವರೆಲ್ಲಾ ಒಟ್ಟಾಗಿ ತಮ್ಮ ಗಂಡಸರು ಭಟ್ಟಿಸಾರಾಯಿಗೆ ಬಲಿಯಾಗುವುದನ್ನು ಹೇಗೆ ನಿಲ್ಲಿಸಿದರೆಂದು, ಹೇಗೆ ಸರ್ಕಾರವನ್ನು ಮಣಿಸಿ, ಸಾರಾಯಿ ಅಂಗಡಿಗಳನ್ನೂ ಮುಚ್ಚಿಸಿ ಪಾನನಿಷೇಧವನ್ನು ಜಾರಿಗೆ ತರಲು ಸರ್ಕಾರದ ಮೇಲೆ ಹೇಗೆ ಒತ್ತಡ ತಂದರೆಂದು ತಿಳಿದಿದೆ. ತಮಿಳುನಾಡಿನ ಪುದುಕೋಟೆ ಜಿಲ್ಲೆಯ ನಮ್ಮ ಸೋದರಿಯರು ಗ್ರಾನೈಟ್ ಗಣಿಗಳ ಮಾಲೀಕರಾದ ಹಿರಿಮೆ, ಅಲ್ಲದೆ ಬ್ಯಾಂಕಿಂಗ್ ವ್ಯವಹಾರ ಮತ್ತು ವ್ಯಾಪಾರಗಳಲ್ಲಿ ಅವರನ್ನೂ ತೊಡಗಿಸಿಕೊಂಡಿದ್ದಾರೆ. ಆ ಮಹಿಳೆಯರು ಸಹ ಒಂದೆರಡು ವರ್ಷಗಳ ಹಿಂದೆ ನಮ್ಮಂತೆಯೇ ಅನಕ್ಷರಸ್ಥರು. ಅಂಜುಬುರುಕರು ಮತ್ತು ಸಂದೇಹ ಉಳ್ಳವರಾಗಿದ್ದರು ಇಂತಹ ಅನೇಕ ಉದಾಹರಣೆಗಳಿವೆ.

ಇಲ್ಲಿ ಯಾವುದೇ "ಸಂದೇಹವಾದಕ್ಕೆ" ಅವಕಾಶವಿಲ್ಲ. ನಮಗೆ ಸಾಧಿಸಲಾಗದ್ದು ಏನೂ ಇಲ್ಲ. ನಾವು ತೀವ್ರವಾಗಿ ಹಂತಹಂತವಾಗಿ ಪ್ರಯತ್ನಿಸಬೇಕಷ್ಟೆ ಒಂಟಿಯಾಗಿ, ಅಥವಾ ಸಣ್ಣಗುಂಪುಗಳಲ್ಲಿ ಪ್ರಯತ್ನಿಸಿದರೆ ವಿಫಲರಾಗುತ್ತೇವೆ ಮತ್ತೆ ಹೊಡೆತ ತಿನ್ನುತ್ತೇವೆ, ಯಾವುದೇ ಜಾತಿ ಮತಕ್ಕೆ ಸೇರಿರಲಿ ನಾವೆಲ್ಲಾ ಒಂದೇ ಹೊಟ್ಟೆ ಎರಡು ಕೈಗಳಿರುವ ಮನುಷ್ಯರೆಂಬುದನ್ನು ಮರೆಯಬಾರದು. ನಾವೆಲ್ಲಾ ಒಂದೇ ರೀತಿಯ ಹಸಿವು, ಒಂದೇ ರೀತಿಯ ದಾರಿದ್ರ್ಯದಲ್ಲಿ ನರಳುತ್ತಿದ್ದೇವೆ. ಒಂದೇ ರೀತಿಯ ಕೊಳಕು ನೀರನ್ನೂ, ಒಂದೇ ರೀತಿಯ ಕೆಟ್ಟವಾಸನೆಯ ಗಾಳಿಯನ್ನು ಸೇವಿಸುತ್ತಿದ್ದೇವೆ. ಅವರು ನಮ್ಮ ಒಗ್ಗಟ್ಟನ್ನು ಒಡೆಯುತ್ತಿದ್ದಾರೆ. ಮತ್ತೆ ತಮ್ಮ ಮೇಲೆ ಬೀಳುವುದನ್ನು ತಪ್ಪಿಸಿಕೊಳ್ಳಲು ನಮ್ಮನ್ನು ಪರಸ್ಪರಕಿತ್ತಾಡಲು ಹಚ್ಚುತ್ತಾರೆ. ಅದೇ ಜನ, ಮೇಲ್ಜಾತಿ-ಕೆಳಜಾತಿ, ಮಂದಿರ-ಮಸೀದಿ ಎಂದು ಹೇಳುತ್ತಾ ಪಾಪ ಪ್ರಜ್ಞೆಯ ವಿಷಬೀಜವನ್ನು ಬಿತ್ತುತ್ತಿದ್ದಾರೆ. ಆದರೆ ನಾವೆಲ್ಲಾ ಒಂದೇ ತಲೆ ಮತ್ತು ಎರಡು ಕಣ್ಣುಗಳಿರುವ ಮನುಷ್ಯರು ಅವುಗಳನ್ನು ಬಳಸಿ ಸತ್ಯತೆಯನ್ನು ಕಂಡುಕೊಳ್ಳೋಣ. ನಮಗೆ ದೊರೆಯಲಿರುವ ಪ್ರತಿಯೊಂದು ಅವಕಾಶವನ್ನು ಬುದ್ಧಿವಂತಿಕೆಯಿಂದ ಬಳಸಿಕೊಳ್ಳೋಣ ನಮಗೊಂದು ಸುವರ್ಣಾವಕಾಶವಿದೆ.

ಇಷ್ಟರಲ್ಲೇ ಗ್ರಾಮ ಪಂಚಾಯಿತಿ ಚುನಾವಣೆಗಳು ಬರಲಿವೆ .ನೀವು ಸದಸ್ಯರು ಮತ್ತು ಅಧ್ಯಕ್ಷರನ್ನು ಆರಿಸಬೇಕಾಗಿದೆ. ಈ ಹಿಂದೆಯೂ ಪಂಚಾಯಿತಿಗಳಿದ್ದವು ಆದರೆ ಈ ಬಾರಿ ಭಿನ್ನವಾದ ಪಂಚಾಯಿತಿಗಳು ಬರಲಿವೆ.

ಮೊದಲನೆಯದಾಗಿ ದೀರ್ಘಕಾಲ ಯಾವ ಚುನಾವಣೆಯೂ ಇರಲಿಲ್ಲ. ಚುನಾವಣೆ ನಿಮ್ಮ ಹಕ್ಕು ಎಂದು ಪರಿಗಣಿಸಿರಲಿಲ್ಲ ಇಂದು ಅದು ಸಿಕ್ಕಿದೆ.

ಎರಡನೆಯಾದಿ ಸ್ಥಳೀಯ ಭೂಮಾಲೀಕರು, ಸದಸ್ಯರು ಅಧ್ಯಕ್ಷರಾಗಿರಲೀ, ಇಲ್ಲದಿರಲಿ ಬಲಾಢ್ಯರಾಗಿದ್ದರು. ಅವರೆಮುರು ಪಂಚಾಯಿತಿಗಳು ದುರ್ಬಲವಾಗಿದ್ದವು. ಈಗ ಅದು ಬದಲಾಗಬೇಕು. ನಾವೇ ಸದಸ್ಯರು ಅಧ್ಯಕ್ಷರನ್ನು ಆರಿಸಬಹುದು. ಇಂದು ಪಂಚಾಯಿತಿಗಳಿಗೆ ಸಾಕಷ್ಟು ಅಧಿಕಾರ ಮತ್ತು ಸಂಪನ್ಮೂಲಗಳಿವೆ. ಅದು ಬೂಮಾಲೀಕರನ್ನೂ ಎದುರಿಸಬಹುದು. ನಿಜ, ಭೂಮಾಲೀಕರು, ಹಣವಂತರು, ಮೇಲ್ಜಾತಿಯವರು ಸದಸ್ಯರು ಅಧ್ಯಕ್ಷರಾಗುವುದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಾರೆ. ಅವರು ಆಶ್ವಾಸನೆಗಳನ್ನು ನೀಡಿ ನಿಮ್ಮನ್ನು ಪುಸಲಾಯಿಸುತ್ತಾ ಒಳಗೊಳಗೆ ದ್ವೇಷಸಾಧಿಸುತ್ತಾ ಬೆನ್ನಿಗೆ ಚೂರಿ ಹಾಕುತ್ತಾರೆ. ಆದುದರಿಂದ ನೀವೇ ಸ್ವತಃ ನಿರ್ಧಾರ ತೆಗೆದುಕೊಳ್ಳಬೇಕು. ಯಾರ ಮುಲಾಜಿಗೂ ಬಲಿಯಾಗಬೇಡಿ. ಆಷ್ಟದಾರಿ ಹಿಡಿಯಬೇಡಿ. ಜಾತಿ ಯಾವುದೇ ಇರಲಿ ಬಡವರೆಲ್ಲಾ ನಮ್ಮವರು. ನಿಮಗೂ ಹಲವುಜನ ಉಳ್ಳವರು ಗೆಳೆಯರಾಗಿರಬಹುದು. ಅವರನ್ನು ಎಚ್ಚರಿಕೆಯಿಂದ ಗಮನಿಸಿ, ಆದರೆ ದ್ವೇಷಿಸಬೇಡಿ , ನಿಮಗೆ ಎಲ್ಲಾ ಗೆಳೆಯರ ಸಹಕಾರ ಬೇಕು. ಪಂಚಾಯಿತಿ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿ, ನಿಮ್ಮಂತಹವರ ಬಗ್ಗೆ ಅನುಕಂಪವಿರುವ ಪ್ರಾಮಾಣಿಕರನ್ನೂ ಆರಿಸಿ, ಹಣ ಆಮಿಷಗಳಿಗೆ ಮರುಳಾಗಬೇಡಿ, ಮತಗಳಿಕೆಗೆ ಹಣ ಕೊಡುವವರು ನಮ್ಮ ಶತ್ರುಗಳು, ದೊಡ್ಡ ಶತ್ರುಗಳು, ಅದರ ಬಗ್ಗೆ ಅನುಮಾನವೇ ಬೇಡ. ಆದರೆ ಅವರನ್ನು ದ್ವೇಷಿಸಬೇಡಿ. ಯಾರ ಮೇಲೆಯೂ ದ್ವೇಷ ಮಾಡಬಾರದೆಂಬ ಮಾನಸಿಕ ನಿರ್ಧಾರ ಮಾಡಿ. ''ದ್ವೇಷ ನಿಮ್ಮ ವಿವೇಕವನ್ನು ಹಾಳುಮಾಡುವುದಲ್ಲದೆ ನಿಮ್ಮನ್ನೂ ದಿಕ್ಕುತಪ್ಪಿಸುತ್ತದೆ.''

ನಾಳಿನ ಪಂಚಾಯಿತಿಗಳ ವ್ಯವಹಾರಗಳಲ್ಲಿ ನೀವು ಪಾಲುದಾರರಾಗಿರುತ್ತೀರಿ, ನಿಮ್ಮ ಹಳ್ಳಿಯ ಆಗುಹೋಗುಗಳನ್ನು ನಿರ್ವಹಿಸಲು ನೀವು ಬಲ್ಲವರಾಗಿರದಿದ್ದರೆ, ನಿಮ್ಮ ಪಂಚಾಯಿತಿಯನ್ನು ಯಾರೂ ಕಾಪಾಡಲಾರರು, ಆರಂಭದಲ್ಲಿ ನೀವು ವಿಫಲರಾಗಬಹುದು. ಆಗ ಯಾರು ನಿಮ್ಮನ್ನು ತುಳಿಯುತ್ತಿದ್ದಾರೋ ಅವರಿಗೆ ಮತನೀಡುವ ಕಟ್ಟುಪಾಡಿಗೆ ನೀವು ಬಲಿಯಾಗಿಬಿಡಬಹುದು. ಧೃತಿಗೆಡಬೇಡಿ, ನೀವು ಕಲಿತುಕೊಳ್ಳುತ್ತೀರಿ. ಪಟ್ಟು ಹಿಡಿದು ಕೆಲಸಮಾಡಬೇಕಷ್ಟೆ, ಈಗಾಗಲೇ ಭಾರತದ ಎರಡು ರಾಜ್ಯಗಳಿಂದ ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಪಂಚಾಯಿತಿಗಳು ನಿಮ್ಮಂತಹ ಜನರಿಂದಲೇ ಪೂರ್ಣವಾಗಿ ನಿಮ್ಮಂತಹವರಿಂದಲೇ ನಿರ್ವಹಿಸಲ್ಪಡುತ್ತಿವೆ. ಪಶ್ಚಿಮ ಬಂಗಾಳದಲ್ಲಂತೂ ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಅವರು ಕೆಲಸ ನಿರ್ವಹಿಸುತ್ತಿದ್ದಾರೆ. ನೀವೂ ಸಹ ಹಾಗೆ

ಮುಂದುವರಿಯಬೇಕು. ಇದು ಪ್ರಜಾಪ್ರಭುತ್ವ ಪಂಚಾಯಿತಿ ನಿಮ್ಮಿಂದ ನಿಮಗೋಸ್ಕರವೇ ಆಗಬೇಕು. ಬೇರೆಯವರಿಂದಾದರೆ, ಅದು ಬೇರೆಯವರಿಗೋಸ್ಕರವೇ ಉಳಿದುಬಿಡುತ್ತದೆ.

ಪ್ರಜಾಪ್ರಭುತ್ವವಾದಿ ಸ್ಥಳೀಯ ಸ್ವಯಂ ಆಡಳಿತದಲ್ಲಿ, ಸಹಭಾಗಿಗಳಾಗಿರುವ ನೀವು ಉತ್ತಮ ರೈತ, ಉತ್ತಮ ನೇಕಾರ ಅಥವಾ ಉತ್ತಮ ಬಡಗಿಯಾಗಿರುವುದಕ್ಕಿಂತ ಬಹುದೂರ ಸಾಗಬೇಕಾಗಿದೆ. ಎಲ್ಲಾ ವಿಷಯಗಳನ್ನೂ ಸಮಗ್ರವಾಗಿ ನೋಡುವ ಅದರ ಆಂತರಿಕ ಸಂಬಂಧಗಳು ಮತ್ತು ಬದಲಾವಣೆಗಳನ್ನು ತಿಳಿಯುವ ಸಾಮರ್ಥ್ಯ ನಿಮಗೆ ಬರಬೇಕು.

ಯಾವ ವಿಷಯವು ಇತರ ವಿಷಯಗಳಿಂದ ಪ್ರತ್ಯೇಕವಾಗಿ ಅಥವಾ ಸ್ವತಂತ್ರವಾಗಿ ಇರುವುದಿಲ್ಲ. ಎಲ್ಲಾ ವಿಷಯಗಳು ಇತರ ವಿಷಯಗಳೊಂದಿಗೆ ಥಳುಕು ಹಾಕಿಕೊಂಡಿರುತ್ತದೆ.

ಎಲ್ಲವು ನಿರಂತರ ಬದಲಾವಣೆಯಾಗುತ್ತಿರುತ್ತದೆ. ನಿನ್ನೆ ಇಂದಿನಂತೆ ಇರಲಿಲ್ಲ. ನಾಳೆ ಇಂದಿನಂತೆ ಇರುವುದೂ ಇಲ್ಲ. ತನ್ನಷ್ಟಕ್ಕೆ ತಾನೇ ಏನೂ ನಡೆಯುವುದಿಲ್ಲ. ಏನಾದರೂ ನಡೆಯಬೇಕಾದರೆ, ನಾವು ಮತ್ತೇನನ್ನಾದರೂ ಮಾಡಬೇಕಾಗುತ್ತದೆ. ನಾವು ನಡೆಸಬೇಕು. ನಾವು ಬಯಸಿದಂತೆ ನಡೆಸಬೇಕು. ಅದಕ್ಕಾಗಿ ದೀರ್ಘಕಾಲ ಸಾಧನೆ ಮಾಡಬೇಕಾಗುತ್ತದೆ. ಅದೂ ನಮಗೆ ಕಲಿಯುವ ಮತ್ತು ಕಲಿತುದನ್ನು ಕಾರ್ಯಗತಗೊಳಿಸುವ ಹಂಬಲವಿದ್ದಾಗ ಮಾತ್ರ ಸಾಧ್ಯ.

ನಮ್ಮ ಹಳ್ಳಿಯಲ್ಲೂ ಮಕ್ಕಳಿಗೆ ಪಾಠಶಾಲೆ ಬೇಕಾಗಿದೆ. ಪಾಠಶಾಲೆನ್ನು ಸ್ಥಾಪಿಸಿ ಅಭಿವೃದ್ಧಿ ಪಡಿಸುವ ಅಧಿಕಾರ ಪಂಚಾಯಿತಿಗಿದೆ. ಇಂದು ಪಂಚಾಯಿತಿಗಳಿಗೆ ಸಂಪನ್ಮೂಲಗಳೇ ಇಲ್ಲದಿರಬಹುದು. ಮುಂದೆ ಹೆಚ್ಚು ದೊರೆಯಲಿದೆ. ಸ್ಥಿತಿವಂತರಿಗೆ ಸ್ವಲ್ಪ ಹೆಚ್ಚಿಗೆ ತೆರಿಗೆ ವಿಧಿಸಬಹುದು. ಅಲ್ಲದೆ ಒಂದು ಗ್ರಂಥಾಲಯ, ಒಂದು ಆರೋಗ್ಯಕೇಂದ್ರ ಸ್ಥಾಪಿಸಬಹುದು. ಎಲ್ಲಾ ಋತುಮಾನ ರಸ್ತೆ ನಿರ್ಮಿಸಬಹುದು..... ಏನೆಲ್ಲಾ ಕೆಲಸಗಳನ್ನು ಮಾಡಬಹುದು.

ತಮಗೆ ಉಳಲಾಗದ ಭೂಮಿಯನ್ನು ಭೂಮಾಲೀಕರು ಬಿಟ್ಟುಕೊಡುವುದನ್ನು ಪರಿಗಣಿಸಬಹುದು. ನಾವು ಉಳುವ ಭೂಮಿ ಖಂಡಿತ ನಮ್ಮದು. ನಿಜ, ಹುಟ್ಟುವಾಗ ನಾವು ಜೊತೆಯಲ್ಲಿ ತಂದಿರಲಿಲ್ಲ. ಆದರೆ ನಾವು ಅದರಲ್ಲಿ ದುಡಿಯುತ್ತೇವೆ. ಬೆಳೆ ತೆಗೆಯುತ್ತೇವೆ. ನಮ್ಮ ಶ್ರಮದ ಉತ್ಪಾದನೆ ನಮಗೆ ಸೇರಬೇಕು. ಬಹಳ ವರ್ಷಗಳ ಹಿಂದೆ ಈ ಭೂಮಿ ನಮಗೇ ಸೇರಿತ್ತು. ಅವರು ತಂತ್ರಕುತಂತ್ರ ಮಾಡಿ ನಮ್ಮಿಂದ ಕಸಿದುಕೊಂಡಿದ್ದಾರೆ. ಅವರು ಭೂಸುಧಾರಣೆ ಕಾಯಿದೆ ಮತ್ತು ಆಸ್ತಿ ಮಿತಿ

ಕಾಯಿದೆಯಿಂದ ನುಣುಚಿಕೊಳ್ಳಲು ನಮ್ಮನ್ನು ವಂಚಿಸಲು, ಭೂಮಿಯನ್ನು ತಮ್ಮ ಮಕ್ಕಳಿಗೆ, ಬಂಧು-ಬಳಗದವರಿಗೆ ಕಡೆಗೆ ನಾಯಿಯ ಹೆಸರಿಗೂ ವರ್ಗಾಯಿಸಿದ್ದಾರೆ.

ಮಾಲೀಕರು ಎಂಬ ಅವರು ಪಟ್ಟಣ ಮತ್ತು ನಗರಗಳಲ್ಲಿ ವಾಸಿಸುತ್ತಾ ನಮ್ಮ ಶ್ರಮದ ಫಲವನೆಲ್ಲಾ ಅನುಭವಿಸುತ್ತಿದ್ದಾರೆ. ಇಲ್ಲ ಇನ್ನು ಮೇಲೆ ಇದು ನಡೆಯುವುದಿಲ್ಲ ಎಂದು ಹೇಳಿ ತಡೆಯುತ್ತೇವೆ. ನಮಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಾಯಬೇಕು. ಈ ಸಮಸ್ಯೆಯನ್ನು ಸರ್ಕಾರದ ಮುಂದಿಡಲು ಪಂಚಾಯಿತಿಗಳು ನಮಗೆ ಧೈರ್ಯಕೊಟ್ಟಿವೆ. ಸಂವಿಧಾನಾತ್ಮಕವಾಗಿ ಅಧಿಕಾರವಿರುವ ಪಂಚಾಯಿತಿಗಳನ್ನು ರಾಜ್ಯ ಸರ್ಕಾರಗಳು ಹೆಚ್ಚು ಕಾಲ ಕಡೆಗಣಿಸುವಂತಿಲ್ಲ. ಇದೇ ಹೊಸ ಪಂಚಾಯಿತಿ ಮತ್ತು ನಗರ ಪಾಲಿಕೆಯ ಉದ್ದೇಶ.

ಹೌದು ನಮ್ಮ ಜೀವನ ಶೈಲಿ ಬದಲಾಗಬೇಕು ನಮಗೆ ಸಾಕಷ್ಟು ಅನ್ನ ಬಟ್ಟೆ ಮತ್ತು ಮನೆ, ಆರೋಗ್ಯ ಮತ್ತು ಶಿಕ್ಷಣ ಮನರಂಜನೆ ಮತ್ತು ವಿಶ್ರಾಂತಿ ಬೇಕು. ಇಂದು ಎಲ್ಲವೂ ಕನಸು. ಆದರೆ ಕನಸುಗಳು ಆಲೋಚನೆಗಳನ್ನು ಹುಟ್ಟಿಸುತ್ತವೆ. ಆಲೋಚನೆಗಳು, ಕಾರ್ಯಕ್ರಮ ಯೋಜಿಸಲು ಮತ್ತು ಕಾರ್ಯ ಪ್ರವೃತ್ತರಾಗಲು ಪ್ರೇರೇಪಿಸುತ್ತವೆ. ಇಂದೆ ಕನಸು ಕಾಣಲು ಆರಂಭಿಸೋಣ. ನಾಳೆಗೇಕೆ ಮುಂದೂಡೋಣ.

# ನಮ್ಮ ಜೀವನ

ನಮ್ಮ ಜೀವನ ಹೋರಾಟದಿಂದ, ಒಂದು ಹೊತ್ತಿನ ಕೂಳಿಗಾಗಿ ದಿನವಿಡೀ ನಡೆಸುವ ಶ್ರಮದಿಂದ ಕೂಡಿದೆ. ನಮ್ಮ ದೇಶದಲ್ಲಿ ಕೆಲವು ಜನರನ್ನು ಬಿಟ್ಟರೆ ಮಿಕ್ಕವರೆಲ್ಲ ತಮ್ಮ ಕನಿಷ್ಠ ಜೀವನ ಮಟ್ಟವನ್ನು ಕಾಯುವಲ್ಲಿ ದಿನರಾತ್ರಿ ದುಡಿಯುವುದರಲ್ಲೇ ಮಗ್ನರಾಗಿದ್ದಾರೆ. ಬಹಳಷ್ಟು ಮಂದಿಗೆ ಕುಡಿಯುವ ನೀರಿಗೆ, ಒಲೆ ಉರಿಸಲು ಬೇಕಾಗುವ ಕಟ್ಟಿಗೆ, ಎಲೆ ಇತ್ಯಾದಿಗಳನ್ನು ಕೂಡಿಸುವುದೂ ಕಷ್ಟವಾಗಿದೆ. ಇನ್ನು ಮನೆ ಎಂಬುದು ಕನಸಿನ ಮಾತೇ ಸರಿ. ನಮ್ಮ ದೇಶದಲ್ಲಿ ತಯಾರಾಗುವ ಸಂಪತ್ತು ಇಡಿ ಜನಸಂಖ್ಯೆಯ ಕೆಲವೇ ಮಂದಿಗಳ (20 ಶೇಕಡಾ) ಕೈ ಸೇರುತ್ತಿದೆ. ಸರ್ಕಾರದ ಪ್ರಕಾರ ಪ್ರತಿಶತ 44 ಮಂದಿ ಬಡತನದ ರೇಖೆಗಿಂತ ಕೆಳಗೆ ಜೀವನ ನಡೆಸುತ್ತಾ ಇದ್ದಾರೆ. ಅಂದರೆ ಇಂತಹವರ ವರ್ಷದ ದುಡಿಮೆ 6.400 ಮಾತ್ರ. ಅಂದರ ತಿಂಗಳಿಗೆ ಸುಮಾರು 540 ರೂ. ಇದರಿಂದಾಗಿ ಅನೇಕ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಶಕ್ತಿ ನಮ್ಮಲ್ಲಿ ಬಹು ಮಂದಿಗೆ ಇಲ್ಲವಾಗಿದೆ.

ನಮ್ಮ ದೇಶಧ ಬಹುಭಾಗದ ಜನ ಜೀವನ ಅತ್ಯಂತ ದಾರುಣಾವಸ್ಥೆಯಲ್ಲಿದೆ. ಕೆಲವು ಅಂಕಿ-ಅಂಶಗಳನ್ನು ಆದ್ದರಿಂದ ಇಲ್ಲಿ ಗಮನಿಸುವುದು ಸೂಕ್ತ:

ಪ್ರತಿಶತ 90 ಜನರಿಗೆ ಶೌಚಾಲಯ ವ್ಯವಸ್ಥೆ ಇಲ್ಲ.

ಪ್ರತಿಶತ 70 ಮಂದಿ ಮಹಿಳೆಯರು ಅನಕ್ಷರಸ್ಥರು.

ಪ್ರತಿಶತ 45 ಮಂದಿಗೆ ಕುಡಿಯಲು ಯೋಗ್ಯವಾದ ನೀರಿಲ್ಲ.

ಈ ರೀತಿಯೇ ಮುಂದುವರಿದಲ್ಲಿ ಇನ್ನು 30 ವರ್ಷಗಳಲ್ಲಿ ಪ್ರಪಂಚದ ಜನಸಂಖ್ಯೆಯಲ್ಲಿ ಅನಕ್ಷರಸ್ಥರ ಸಂಖ್ಯೆಯಲ್ಲಿ ಪ್ರತಿಶತ 70 ಮಂದಿ ಶೌಚಾಲಯ, ಕುಡಿಯಲು ಯೋಗ್ಯ ನೀರಿಲ್ಲದವರಲ್ಲಿ ಪ್ರತಿಶತ 60 ಮಂದಿ ನಾವುಗಳೇ ಆಗುತ್ತೇವೆ. 50 ವರ್ಷಗಳ ನಮ್ಮ ಸ್ವಾತಂತ್ರ್ಯ ನಮಗೆ ಬಡತನ, ಅನಾರೋಗ್ಯ, ಅನಕ್ಷರತೆಯನ್ನು ತಂದೊಡ್ಡಿದೆ.

## *ಹೊಸ ಆರ್ಥಿಕ ನೀತಿ--------ವಾಸ್ತವ ಮತ್ತು ಭ್ರಮೆ*

ನಮ್ಮ ದೇಶದ ಈಗಿನ ಹೊಸ ಆರ್ಥಿಕ ನೀತಿಯು ಶ್ರೀಮಂತರ ಪರ, ಬಂಡವಾಳಶಾಹಿಗಳ, ಪರವಾಗಿ ಯೋಜಿಸಲ್ಪಟ್ಟಿದೆ. ದೇಶವನ್ನು ಆರ್ಥಿಕವಾಗಿ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ಮುನ್ನಡೆಯಲು ನಮ್ಮ ಆದಾಯವನ್ನು ಹೆಚ್ಚಿಸಲು ಈ ಹೊಸ ಆರ್ಥಿಕ ನೀತಿ ಅಗತ್ಯವಾಗಿದೆ ಎಂದು ಸರ್ಕಾರದ ಹೇಳಿಕೆ. ಈ ನೀತಿಯ ಪ್ರಮುಖ ಉದ್ದೇಶಗಳೆಂದರೆ,

1. ಸರ್ಕಾರದ ವೆಚ್ಚದಲ್ಲಿ ಕಡಿತ.



COMMUNITY HEALTH CELL LIBRARY AND DOCUMENTATION UNIT BANGALORE
SOS-100 N94
06181

2. ಸಾಮಾಜಿಕ ಕಾರ್ಯಗಳಿಗೆ ಕೊಡುವ ಅನುದಾನದಲ್ಲಿ ಕಡಿತ.

3. ಸಬ್ಸಿಡಿಯನ್ನು ಹಿಂದೆಗೆದುಕೊಳ್ಳುವುದು.

4. ಬ್ಯಾಂಕ್ ಸಾಲಗಳಲ್ಲಿ ಕಡಿತ.

5. ರೂಪಾಯಿಯ ಅಪಮೌಲ್ಯ.

6. ಆಮದು ಲೈಸೆನ್ಸ್ ಇಲ್ಲ.

7. ಕಸ್ಟಮ್ಸ್ ತೆರಿಗೆಗಳಲ್ಲಿ ಇಳಿತ.

8. ಸಂಬಳ ತುಟ್ಟಿಭತ್ಯೆಗಳಲ್ಲಿ ಕಡಿತ.

9. ಖಾಸಗೀಕರಣ.

10. ಸಾರ್ವಜನಿಕ ಇಲಾಖೆ, ಕಂಪೆನಿಗಳ ಮುಚ್ಚೋಣ ಇತ್ಯಾದಿ.

ಆದರೆ ಇವೆಲ್ಲವುಗಳು ನಮಗೆ ಸಾಲ ನೀಡಿರುವ ವಿಶ್ವ ಬ್ಯಾಂಕ್ ಮತ್ತು ಐ.ಎಂ.ಎಫ್‌ನ ಸೂತ್ರಗಳು. ಈ ಸೂತ್ರಗಳನ್ನು ಪಾಲಿಸಿದ ಯಾವುದೇ ದೇಶ ಈವರೆಗೆ ಉದ್ಧಾರವಾಗಿಲ್ಲ. ಬದಲು ದಿವಾಳಿಯೆದ್ದಿದೆ. ಮೊದಲ ಸಲ ಶ್ರೀಮತಿ ಇಂದಿರಾಗಾಂಧಿ ಸರ್ಕಾರ 1980 ರಲ್ಲಿ ಈ ಸಾಲವನ್ನು ಪಡೆಯಿತು. ನಂತರದಲ್ಲಿ ಹೊಸ ಆರ್ಥಿಕ ನೀತಿಯು ಹೆಚ್ಚು ತೀವ್ರವಾಗಿ ನಮ್ಮಲ್ಲಿ ಅನುಷ್ಠಾನಗೊಳಿಸಲ್ಪಡುತ್ತಿದೆ.

## ಲ್ಯಾಟಿನ್ ಅಮೆರಿಕಾ ಮತ್ತು ಆಫ್ರಿಕಾ ದಿವಾಳಿ ಎದ್ದ ಬಗೆ

ಹೊಸ ಆರ್ಥಿಕ ನೀತಿಯ ಪರಿಣಾಮವಾಗಿ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾ ದೇಶಗಳು ದಿವಾಳಿ ಎದ್ದಿವೆ. ಆಫ್ರಿಕಾದ ಕೆಲಸಗಾರರ ಕೂಲಿ, ಸಂಬಳ ಇತ್ಯಾದಿ ಶೇಕಡಾ 30 ರಷ್ಟು ಕುಸಿದಿದೆ. ನಿರುದ್ಯೋಗ ಶರವೇಗದಲ್ಲಿ ಬೆಳೆದಿದೆ. ವ್ಯಾಪಾರ ವಹಿವಾಟು ಶೇಕಡಾ 30 ರಷ್ಟು ಕುಸಿದಿದೆ. ಲ್ಯಾಟಿನ್ ಅಮೆರಿಕಾದಲ್ಲಿ ಕ್ರಮವಾಗಿ ಇದು 20 ಮತ್ತು 22 ಶೇಕಡಾ. ಹೀಗಾಗಿ ಬಡವರ ಮತ್ತು ಶ್ರೀಮಂತರ ನಡುವಿನ ಅಂತರ ಅಗಾಧವಾಗಿ ಹೆಚ್ಚಿದ್ದು, ಸಾಮಾಜಿಕ ಅಭದ್ರತೆ ಹಾಗೂ ಅಶಾಂತಿಗೆ ಕಾರಣವಾಗಿ ಪರಿಣಮಿಸಿದೆ.

ಹೊಸ ಆರ್ಥಿಕ ನೀತಿಯು ದೇಶೀಯ ಹಿತಾಸಕ್ತಿಗಳಿಗಿಂತ ಅಂತರ ರಾಷ್ಟ್ರೀಯ ಸಾಲಗಾರರ ಹಿತಾಸಕ್ತಿಯನ್ನು ಪ್ರಮುಖವಾಗಿ ಪರಿಗಣಿಸುತ್ತದೆ. ಹೊಸ ಆರ್ಥಿಕ ನೀತಿಯು ಕೇವಲ ಹಣ ಗಳಿಸುವ ಕಾರ್ಯಗಳಿಗೆ, ಚಿಂತನೆಗಳಿಗೆ ಪ್ರಾಮುಖ್ಯತೆ ನೀಡುತ್ತದೆ. ಹೀಗಾಗಿ ಅನೇಕ ಸಾಮಾಜಿಕ ಮೌಲ್ಯಗಳು ಕುಸಿಯುವುವು. ಭ್ರಷ್ಟಾಚಾರ, ಅಪರಾಧಗಳು ಹೆಚ್ಚಾಗುವುವು.

ಹೊಸ ಆರ್ಥಿಕ ನೀತಿಯ ಪರಿಣಾಮವನ್ನು ಈಗಾಗಲೇ ನಾವು ಕಾಣುತ್ತಿದ್ದೇವೆ. 1992 ರ ಬಜೆಟ್‌ನಲ್ಲಿ ಐ.ಎಂ.ಎಫ್ ವಿಶ್ವ ಬ್ಯಾಂಕ್ ಸಲಹೆಗೆ ಅನುಗುಣವಾಗಿ ಮಾಲಿನ್ಯ ನಿಯಂತ್ರಣ ಮತ್ತು ತಡೆಗೆ ನೀಡುವ ಹಣದಲ್ಲಿ 35 ಶೇಕಡಾ ಕಡಿತ, ಗ್ರಾಮೀಣ ಶುಚಿತ್ವಕ್ಕೆ

ಶೇಕಡಾ 47 ಕಡಿತ, ಗ್ರಾಮೀಣ ನೀರು ಸರಬರಾಜಿನಲ್ಲಿ ಶೇಕಡಾ 39 ಕಡಿತ, ಇತ್ಯಾದಿಗಳನ್ನು ಕಾಣಬಹುದು.

ಅದೇ ರೀತಿ ಆರೋಗ್ಯ, ವಿದ್ಯಾಭ್ಯಾಸ ಮತ್ತು ಗ್ರಾಮೀಣ ಕಲ್ಯಾಣಕಾರ್ಯಗಳಿಗೆ ವಿನಿಯೋಗಿಸಲ್ಪಡುವ ಮೊಬಲಗುಗಳಲ್ಲಿ ಕಡಿತವನ್ನು ತರಲಾಗಿದೆ. ಉದ್ಯೋಗ ಸೃಷ್ಟಿ ಮತ್ತು ದಾರಿದ್ರ್ಯ ಕಡಿತ ಯೋಜನೆಗಳ ಮೊಬಲಗುಗಳಲ್ಲಿ ರೂ.1100 ಕೋಟಿ ಕಡಿಮೆಗೊಳಿಸಲಾಗಿದೆ. ಅಕ್ಕಿ, ಗೋಧಿ ಹಾಗೂ ಇತರ ಧಾನ್ಯಗಳ ಬೆಲೆ ಶೇಕಡಾ 30 ರಷ್ಟು ಕಳೆದ ಎರಡು ವರ್ಷಗಳಲ್ಲಿ ಹೆಚ್ಚಾಗಿದ್ದು, ಅಂಗಡಿಗಳಲ್ಲಿ ಇದು ಇನ್ನೂ ಹೆಚ್ಚಾಗಿದೆ.

## ಎಗ್ಸಿಟ್ ಪಾಲಿಸಿ -- ನಿರ್ಗಮನ ನೀತಿ

ಹೊಸ ಆರ್ಥಿಕ ನೀತಿಯ ಬೆನ್ನೆಲುಬಾಗಿ ಹೊಸ ಕೈಗಾರಿಕಾ ನೀತಿಯನ್ನು ವಿಶ್ವ ಬ್ಯಾಂಕ್ ನಮಗೆ ನೀಡಿದೆ. ಇದರ ಪ್ರಕಾರ ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳನ್ನು ಮುಚ್ಚುವುದು. ಅಲ್ಲಿ ಉದ್ಯೋಗದಲ್ಲಿರುವವರನ್ನು ನಿವೃತ್ತಿಗೊಳಿಸುವುದು. ಸ್ವ ಇಚ್ಛೆಯಿಂದ ಬಿಟ್ಟು ಹೋಗುವವರಿಗೆ ಸ್ವಲ್ಪ ಹಣ ಕೈಗೆ ನೀಡಲಾಗುವುದು. ಹೀಗಾಗಿ ಮುಂದಿನ 2 ವರ್ಷಗಳಲ್ಲಿ 60 ಲಕ್ಷ ಕಾರ್ಮಿಕರು ಬೀದಿ ಪಾಲಾಗುವರು. ಇದಕ್ಕಾಗಿ ವಿಶ್ವಬ್ಯಾಂಕ್ ಸರ್ಕಾರಕ್ಕೆ 200 ಕೋಟಿ ರೂ. ಸಹಾಯಧನ ನೀಡಲಿದೆ.

## ನೆಹರೂ ಅವರ ಕನಸು

ನೂರಾರೂ ವರುಷಗಳು ಶೋಷಣೆಗೆ ಒಳಗಾಗಿದ್ದ ಭಾರತ ಆರ್ಥಿಕವಾಗಿ ಹಿಂದುಳಿದಿತ್ತು. ಔದ್ಯೋಗಿಕ ಕ್ಷೇತ್ರದಲ್ಲಿ ನಗಣ್ಯವಾಗಿತ್ತು. ಜನತೆಗೆ ಅವಶ್ಯವಾದ ಗ್ರಾಹಕ ವಸ್ತುಗಳನ್ನು ತಯಾರಿಸಲೂ, ಇದಕ್ಕೆ ಬೇಕಾದ ಯಂತ್ರೋಪಕರಣಗಳನ್ನು ತಯಾರಿಸುವ ಬೃಹತ್ ಯಂತ್ರಗಳನ್ನು ತಯಾರಿಸಲು ಭಾರತವನ್ನು ಶೀಘ್ರವಾಗಿ "ಔದ್ಯೋಗೀಕರಣ" ಗೊಳಿಸಿ ಸ್ವಾವಲಂಬಿಯಾಗಿ ಮಾಡುವುದೇ ನೆಹರೂರವರ ಕನಸಾಗಿತ್ತು. ಆದ್ದರಿಂದ ಬೃಹತ್ ಕೈಗಾರೀಕರಣಕ್ಕೆ ಯೋಜನೆಗಳಲ್ಲಿ ಒತ್ತನ್ನು ನೀಡಲಾಯಿತು. ಪಂಚವಾರ್ಷಿಕ ಯೋಜನೆಗಳು ಆರಂಭವಾದವು.

ಸ್ವತಂತ್ರ ಭಾರತ ತನ್ನ ಸ್ವಾವಲಂಬನೆಯನ್ನು ಸಾಧಿಸುವುದು ಪಾಶ್ಚಾತ್ಯ ಬಂಡವಾಳಶಾಹೀ ರಾಷ್ಟ್ರಗಳಾದ ಅಮೆರಿಕಾ, ಬ್ರಿಟನ್, ಫ್ರಾನ್ಸ್, ಜರ್ಮನಿ ಇವರುಗಳಿಗೆ ಇಷ್ಟವಿರಲಿಲ್ಲ. ಆದ್ದರಿಂದ ಯಾವುದೇ ರೀತಿಯ ಸಹಾಯ ಹಸ್ತವನ್ನು ಈ ರಾಷ್ಟ್ರಗಳು ಅಂದು ನಮಗೆ ನೀಡಿಲ್ಲ. ನೆಹರೂ ಅವರು ಆಗ ಸಮಾಜವಾದೀ ರಾಷ್ಟ್ರಗಳಿಂದ ನೆರವನ್ನು ಪಡೆಯಬೇಕಾಯಿತು. ಸಮಾಜವಾದೀ ರಾಷ್ಟ್ರಗಳಾದ ರಷ್ಯಾ ಮುಂತಾದವುಗಳು ಇದರ

ಸಹಾಯವನ್ನು, ತರಬೇತಿಗಳನ್ನು ಉಚಿತವಾಗಿ ನೀಡಿದವು. ಅನಂತರದಲ್ಲಿ ಜರ್ಮನಿ ಮತ್ತು ಬ್ರಿಟನ್ ಭಾರತದ ನೆರವಿಗೆ ಬಂದವು.

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿಯೇ 1931 ರಲ್ಲಿ ತನ್ನ ಮುಂಬಯಿ ಅಧಿವೇಶನದಲ್ಲಿ (ಆಗಸ್ಟ್ 6 ರಿಂದ ಆಗಸ್ಟ್ 8 ರವರೆಗೆ)ಎ.ಐ.ಸಿ.ಸಿ. ಸಭೆಯು" ಪ್ರಮುಖ ಕೈಗಾರಿಕೆಗಳನ್ನು, ಖನಿಜ ಸಂಪತ್ತನ್ನು, ರೈಲ್ವೆ ಜಲಮಾರ್ಗ, ವಾಯುಮಾರ್ಗ ಮುಂತಾದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಸ್ವಾಮ್ಯವನ್ನು ಸರ್ಕಾರವೇ ವಹಿಸುವುದು" ಎಂಬ ನೀತಿಯನ್ನು ನಿರೂಪಿಸಲಾಗಿತ್ತು. ನೆಹರೂರವರು ಸ್ವತಂತ್ರ ಭಾರತದಲ್ಲಿ ಈ ನೀತಿಯನ್ನು ಜಾರಿಗೊಳಿಸಿದರು.

ಸಾರ್ವಜನಿಕ ರಂಗದ ಸ್ಥಾಪನೆಯು ಸಾಮಾಜಿಕ ಅಸಮಾನತೆಗಳನ್ನು ತೊಡೆಯುವಲ್ಲಿ ಹಾಗೂ ನಿರುದ್ಯೋಗ ಸಮಸ್ಯೆಯ ನಿವಾರಣೆಯಲ್ಲಿ ಪ್ರಮುಖ ಕಾರ್ಯ ಕೈಗೊಂಡಿದೆ. ಭಾರತವು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಬಲ ರಾಷ್ಟ್ರವಾಗಿ ಬೆಳೆಯಲು ಅಗತ್ಯವಾದ ಭದ್ರ ಬುನಾದಿಯನ್ನು ಸಾರ್ವಜನಿಕ ರಂಗದಲ್ಲಿನ ಕೈಗಾರಿಕೆಗಳು ನೀಡಿವೆ.

## ನೆಹರೂ ನೀತಿಗೆ ವಿದಾಯ

ಆಮದು ಮಾಡುವ ವಸ್ತುಗಳ ಬದಲಿಗೆ ದೇಶದಲ್ಲೇ ಅಂತಹ ವಸ್ತುಗಳನ್ನು ತಯಾರಿಸುವ ಹೆಸರಿನಲ್ಲಿ ರಾಜೀವ ಗಾಂಧಿಯವರು ನೂರಾರು ಬಹು ರಾಷ್ಟ್ರೀಯ ಕಂಪನಿಗೆ ಭಾರತಕ್ಕೆ ಪ್ರವೇಶಿಸಲು ಅನುಮತಿ ಕೊಟ್ಟರು. ನಮ್ಮ ದೇಶದ ಸಂಪನ್ಮೂಲಗಳ ಸೂರೆಗೆ ಅವಕಾಶವಿತ್ತರು. ರಾಜೀವ್ ಗಾಂಧಿಯವರು ಬರುವ ಮೊದಲು ನಮ್ಮ ವಿದೇಶೀ ಸಾಲ 2000 ಕೋಟಿ ರೂಪಾಯಿ ಇತ್ತು. ನಂತರ ಹತ್ತು ವರ್ಷಗಳಲ್ಲಿ ಅದು 4 ರಷ್ಟು ಹೆಚ್ಚಿತು. ಈಗ ಭಾರತದ ವಿದೇಶೀ ಸಾಲದ ಮೊತ್ತ 16 ಲಕ್ಷ ಕೋಟಿ ರೂಗಳು. ಈ ಹಣವೆಲ್ಲ ಎಲ್ಲಿ ಹೋಯಿತು?

7 ಪಂಚವಾರ್ಷಿಕ ಯೋಜನೆಗಳಲ್ಲಿ ತೊಡಗಿಸಿದ ಹಣದ ಸಿಂಹಪಾಲು ಶ್ರೀಮಂತ ವರ್ಗ ಹೀರಿಕೊಂಡಿದೆ. ವಿದೇಶೀ ಸಾಲವನ್ನು ಸಂಪತ್ತನ್ನು ಉತ್ಪಾದಿಸುವ ಕಾರ್ಯಕ್ರಮಗಳಲ್ಲಿ ಉಪಯೋಗಿಸಿಲ್ಲ. ಅನೇಕ ವೇಳೆ ಹಳೆಯ ಸಾಲ ಮತ್ತು ಅದರ ಬಡ್ಡಿಯನ್ನು ತೀರಿಸಲು ಹೊಸ ಸಾಲವನ್ನು ಪಡೆಯಲಾಗಿದೆ. ವಿದೇಶೀ ಸಾಲದ ಹಣದಿಂದ ಮನೆಗಳಾಗಲೀ, ಗ್ರಾಮಾಂತರಗಳಲ್ಲಿ ಕುಡಿವ ನೀರಾಗಲೀ, ಉದ್ಯೋಗ ಕಲ್ಪಿಸುವ ಉದ್ಯಮವಾಗಲೀ ನಿರ್ಮಾಣವಾಗಿಲ್ಲ. ಸ್ವಾರ್ಥಿ ರಾಜಕಾರಣಿಗಳು ಅಧಿಕಾರದಲ್ಲಿ ಉಳಿಯಲು ನಡೆಸಲಾದ ನಿರುಪಯುಕ್ತ ಯೋಜನೆಗಳಿಗೆ ಸರ್ಕಾರದ ಉನ್ನತ ಅಧಿಕಾರಿಗಳ ಜೊಕ್ಕಸಕ್ಕೆ ಈ ಹಣ ಹೋಗಿದೆ.

## ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ ಮತ್ತು ವಿಶ್ವ ಬ್ಯಾಂಕ್

ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಲ ನೀಡುವ ಸಂಸ್ಥೆಗಳು ಇವು. ಅನೇಕ ದೇಶಗಳು ಇದರಲ್ಲಿ ಪಾಲುದಾರರು. ಆದರೆ ಪಾಶ್ಚಿಮಾತ್ಯ ಬಂಡವಾಳಶಾಹೀ ದೇಶಗಳು ಮಾತು ಹಾಗೂ ಆಸಕ್ತಿಗಳಿಗೇ ಇಲ್ಲಿ ಪ್ರಾಧಾನ್ಯ. ಏಕೆಂದರೆ ಪಾಲುಗಾರಿಕೆಯಲ್ಲಿ ಅವರು ತೊಡಗಿಸಿರುವ ಹಣ ಅತ್ಯಧಿಕವಾಗಿರುವುದು.

ಇವು ಮೊದಮೊದಲು ಸರಳವಾದ ಷರತ್ತುಗಳ ಮೇಲೆ ಸಾಲವನ್ನು ನೀಡುವುವು. ಸಾಲದ ಶೂಲಕ್ಕೆ ಸಿಕ್ಕ ನಂತರ ಉಗ್ರವಾದ ಕರಾರುಗಳನ್ನು ಹಾಕುವುವು. ನಂತರ ಸಾಲ ತೆಗೆದುಕೊಂಡ ದೇಶವನ್ನು ಈ ಬಂಡವಾಳಶಾಹೀ ದೇಶಗಳು ತಮ್ಮ ಹಿತಾಸಕ್ತಿಗೆ ತಕ್ಕಂತೆ ಕುಣಿಸುತ್ತಾ, ಸಂಪತ್ತನ್ನೆಲ್ಲಾ ಲೂಟಿ ಮಾಡುವುವು. ಉದಾಹರಣೆಗೆ ಮೆಕ್ಸಿಕೊ, ಬ್ರಜಿಲ್ ನಂತಹ ಲ್ಯಾಟಿನ್ ಅಮೇರಿಕಾ ದೇಶಗಳೂ ಹಾಗೂ ಆಫ್ರಿಕಾದ ಕೆಲವು ರಾಷ್ಟ್ರಗಳು ಐ.ಎಂ.ಎಫ್. ವಿಶ್ವ ಬ್ಯಾಂಕ್‌ನಿಂದ ಸಾಲ ಪಡೆದು ದಿವಾಳಿ ಎದ್ದುದನ್ನು ನೋಡಬಹುದು.

## ಪರ್ಯಾಯ ಆರ್ಥಿಕ ನೀತಿ

ದೇಶದ 32 ಮಂದಿ ಪ್ರಖ್ಯಾತ ಆರ್ಥಿಕ ತಜ್ಞರು ಇಂದಿನ ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗಲು ಕೆಲವು ಸಲಹೆಗಳನ್ನು ನೀಡಿದ್ದಾರೆ.

ಅಂತರಿಕವಾಗಿ ದೊರಕುವ ಸ್ವಾಭಾವಿಕ ಸಂಪನ್ಮೂಲಗಳನ್ನು ಬಳಸುವ ಮತ್ತು ಅಂತರಿಕ ಬೇಡಿಕೆಯ ಮೇಲೆ ಅವಲಂಬನ ಮಾಡುವಂತಹ ನೀತಿಯ ಬಗ್ಗೆ ಇವರುಗಳು ತಿಳಿಸಿರುತ್ತಾರೆ. ಈ ಪರ್ಯಾಯ ಆರ್ಥಿಕ ನೀತಿಯ ಕೆಲವು ಸೂಚಿತಕ್ರಮಗಳು ಹೀಗಿವೆ.

1. ಪ್ರತ್ಯಕ್ಷ ತೆರಿಗೆಗಳಿಂದ ಆದಾಯ ಹೆಚ್ಚಿರಬೇಕು. ಗ್ರಾಮಾಂತರ ಪ್ರದೇಶದ ಶ್ರೀಮಂತರು ಮತ್ತು ಕಂಟ್ರಾಕ್ಟರ್‌ಗಳನ್ನು ತೆರಿಗೆ ಜಾಲದಲ್ಲಿ ತರಬೇಕು. ಕಂಪನಿಗಳ ಡಿವಿಡೆಂಟ್‌ಗಳ ಮೇಲೂ ತೆರಿಗೆ ಹಾಕಬೇಕು. ಸಂಪತ್ತಿನ ಮೇಲೆ ತೆರಿಗೆ ಜಾರಿಗೆ ಬರಬೇಕು.
2. ಸರ್ಕಾರೀ ವೆಚ್ಚವನ್ನು ತೀವ್ರವಾಗಿ ಕಡಿಮೆ ಮಾಡಬೇಕು.
3. ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಸುಭದ್ರಗೊಳಿಸಬೇಕು. ಸಾರ್ವಜನಿಕ ವಿತರಣಾವ್ಯವಸ್ಥೆ ವಿಸ್ತರಿಸಲ್ಪಡಬೇಕು.
4. ಡಂಕಲ್ ಸಲಹೆಯನ್ನು ತಿರಸ್ಕರಿಸಬೇಕು. ಮೂರನೇ ವಿಶ್ವದ ಇತರ ರಾಷ್ಟ್ರಗಳೊಂದಿಗೆ ಡಂಕಲ್ ಸಲಹೆ ವಿರುದ್ಧ ಹೋರಾಡಬೇಕು.
5. ದೇಶೀಯ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಯನ್ನು ಸತ್ವಯುತಗೊಳಿಸಬೇಕು.

6. ತೆರಿಗೆದಾರರು ಪೊಂದಿರುವ ಉತ್ಪನ್ನದಾಯಕ ಭೂಮಿ, ಪಡೆವ ಉತ್ಪನ್ನಗಳಿಗೆ ಅನುಗುಣವಾಗಿ ತೆರಿಗೆ ಪಾಕಬೇಕು. ಶ್ರೀಮಂತ ರೈತರಿಗೆ ರಿಯಾಯ್ತಿ ದರದಲ್ಲಿ ಸೀಮೆ ಗೊಬ್ಬರ ಇತ್ಯಾದಿ ಕೊಡಬಾರದು.

ವಾಸ್ತವಿಕ ಆಧಾರದ ಮೇಲೆ ಜಾರಿಗೆ ಬರುವ ಭೂ ಸುಧಾರಣೆಯಿಂದ ಉತ್ಪಾದನಾ ಚೈತನ್ಯ ವೃದ್ಧಿಯಾಗಿ, ಅಂತರಿಕ ಮಾರುಕಟ್ಟೆ ವಿಶಾಲವಾಗುವುದು. ದುರ್ಬಲ ವರ್ಗದವರು ಸಾಮಾಜಿಕ ದಬ್ಬಾಳಿಕೆಯನ್ನು ಎದುರಿಸಲು ಸಾಧ್ಯ.

ಇನ್ನೂ ಅನೇಕ ಸಲಹೆಗಳಿವೆ. ಅದಲ್ಲದೆ ಮಾಹಾತ್ಮಗಾಂಧೀಜಿಯವರು ಹೇಳಿರುವಂತೆ ಹಳ್ಳಿಗಳನ್ನು ಮತ್ತೆ ಸ್ವಪರಿಪೂರ್ಣಗೊಳಿಸುವ, ಗ್ರಾಮ ಸ್ವರಾಜ್ಯವನ್ನು ಸಾಕಾರಗೊಳಿಸುವ ಬಗ್ಗೆಯೂ ಸಹ ನಿಲುವುಗಳಿವೆ, ಇದರ ಪ್ರಕಾರ ತನ್ನ ಎಲ್ಲ ಅವಶ್ಯಕತೆಗಳನ್ನು ಅಲ್ಲಿಯ ಗ್ರಾಮವೇ ಪೂರೈಸುತ್ತದೆ. ಗ್ರಾಮದ ರೈತರು ಬೀಜದ ಕಾಳು ಮತ್ತು ಗೊಬ್ಬರಕ್ಕ ಹೊರಗಿನವರ ಆಶ್ರಯ ಕೋರುವ ಅಗತ್ಯವಿರುವುದಿಲ್ಲ

ಜನರಲ್ಲಿ ಕೊಳ್ಳುವ ಶಕ್ತಿ ಬೆಳೆಯದೆ, ಉತ್ಪಾದನೆ ಬೆಳೆಸುವುದರಲ್ಲಿ ಅರ್ಥವಿಲ್ಲ. ಕೊಳ್ಳುವ ಶಕ್ತಿ ಬೆಳೆಯಲು ಜನರ ಶ್ರಮ ವಿನಿಯೋಗವಾಗಬೇಕು. ಜನರ ಶ್ರಮ ಶಕ್ತಿ ಬಳಸಲ್ಪಡುವ ಉದ್ಯೋಗಗಳ ನಿರ್ಮಾಣ ಆಗಬೇಕು.

ಇದನ್ನು ಒಬ್ಬರಿಂದ ಮಾಡಲು ಸಾಧ್ಯವಿಲ್ಲ. ಒಂದು ಜನಾಂದೋಳನವೇ ಇದರ ಬಗ್ಗೆ ನಡೆಯಬೇಕು. ಸಾಕ್ಷರತೆಯ ಮಾದರೀ ಕಾರ್ಯಕ್ರಮಗಳು ನಡೆದು ಅದರಲ್ಲಿ ಎಲ್ಲರೂ ಭಾಗಿಯಾಗಬೇಕು. ಆಗ ಮಾತ್ರ ಬದಲಾವಣೆ ಸಾಧ್ಯ. ಆಗ ಮಾತ್ರ ಬಂಡವಾಳಶಾಹೀ ಶಕ್ತಿಗಳ ವಿರುದ್ಧ ಪರ್ಯಾಯ ವ್ಯವಸ್ಥೆಯನ್ನು ತಂದಿರಿಸಿ, ಅದನ್ನು ಸಂರಕ್ಷಿಸಿಕೊಂಡು ಮುಂದೆ ಕೊಂಡೊಯ್ಯಲು ಸಾಧ್ಯ.